ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ಭಾರತೀಯ ಪರಿಸರದಲ್ಲಿನ ಸೈದ್ಧಾಂತಿಕ ಒಲವುಗಳು

ರಾಷ್ಟ್ರೀಯ ಉದ್ಯೋಗಗಳು

ಭವತಿ ಭಿಕ್ಷಾಂ ದೇಹಿ–ಆನಂದರ ಕಥೆ

ಸಂಪುಟ : ೧೧ ಜನವರಿ ೧೯೬೧ ಸಂಚಿಕೆ :

ಈ ಸಂಚಿಕೆಯಲ್ಲಿ

ವಿಳಾಸ :– **ಜನಪದ ವಿಚಾರ**

ಜನಪದ ಸೇವಾ ಟ್ರಸ್ಟ್, ಮೇಲುಕೋಟೆ–571 431

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ಸಂಪುಟ: ೧೧; ಮೇಲುಕೋಟೆ. ಜನವರಿ ೧೫, ೧೯೯೧; ಸಂಚಿಕೆ ೭

ನಿಮ್ಮೊಂದಿಗೆ.........

'ಜನಪದ ವಿಚಾರ' ದ ಈ ಸಂಚಿಕೆ ಸಿದ್ಧಗೊಳ್ಳುತ್ತಿರುವಾಗ ೧೯೯೦ ನೇ ಇಸ್ವಿಯ ಕೆಲವು ಕೆಟ್ಟ ಘಟನೆಗಳ ಗ್ರಹಣದ ನೆರಳು ೧೯೯೧ ರ ಹೊಸ ವರ್ಷದ ಪಯಣದ ದಾರಿಯ ಮೇಲೂ ಉದ್ದವಾಗಿ ಬಿದ್ದಿದೆ.

ಭಾರತದ ಕಳೆದ ವರ್ಷದ ಯಾವ ಪ್ರಮುಖ ರಾಜಕೀಯ ಸಮಸ್ಯೆಯೂ– ಪಂಜಾಬ್, ಕಾಶ್ಮೀರ್, ಆಸ್ಸಾಂ, ಮಂದಿರ–ಮಸೀದಿ ಅಲ್ಲದೆ ಕೇಂದ್ರ ಸರಕಾರದ ಸ್ಥಿರತೆ - ಪರಿಹಾರ ಕಾಣದೆ ಹೊಸ ವರ್ಷಕ್ಕೂ ತಲೆ ಹಾಕಿವೆ. ಇಂಥ ಸಂದರ್ಭದಲ್ಲಿ ಹೊಸ ವರ್ಷದ ಪರಸ್ಪರ ಶುಭ ಹಾರೈಕೆ ಅಥವಾ ಹೊಸ ವರ್ಷದ ಆಗಮನದ ಸ್ವಾಗತ ಎಳ್ಳಷ್ಟೂ ಬೆಲೆ ಪಡೆಯುವುದಿಲ್ಲ. ಎಲ್ಲವೂ ಕೃತಕ ಹಾಗೂ ಭೌತಿಕ ಲಾಭದಾಸೆಯ ನಾಟಕ.

ಅಂತರ್ ರಾಷ್ಟ್ರೀಯ ಕ್ಷೇತ್ರದಲ್ಲೂ ಅಷ್ಟೇ. ಪರಿಸ್ಥಿತಿ ಯಾವ ರೀತಿಯಲ್ಲೂ ಸಮಾಧಾನಕರವಾಗಿಲ್ಲ. ರಶಿಯಾ ತೀವ್ರ ರಾಜಕೀಯ ವಿಪ್ಲವವನ್ನು ಅನುಭವಿಸು ತ್ತಿದೆ. ಮಾರ್ಕ್ಸ ಸಿದ್ಧಾಂತ ಅಪ್ರಸ್ತುತವೆನಿಸುತ್ತಿದೆ. ಅಲ್ಲಿ ಬದಿಗೆ ಸರಿಯು ತ್ತಿರುವ ಈ ಸಿದ್ಧಾಂತದ ಸ್ಥಾನವನ್ನು ತುಂಬವ ಅಷ್ಟೇ ಪ್ರಭಾವಯುತವಾದ ಸಿದ್ಧಾಂತ ಅಲ್ಲಿಯ ನೇತಾರರಿಗೆ ಕಾಣುತ್ತಿಲ್ಲ. ಸ್ವತಂತ್ರ ಮಾರುಕಟ್ಟೆಯ ಪಾಶ್ಚಿ ಮಾತ್ಯ ಅರ್ಥ ವ್ಯವಸ್ಥೆಯ ಅಂಧಾನುಕರಣೆ ಅಲ್ಲಿ ನಡೆಯುತ್ತಿದೆ. ಪ್ರಪಂಚದಲ್ಲಿ ಈ ಪ್ರಕಾರದ ಸ್ವಚ್ಛಂದ ಆರ್ಥಿಕ ನೀತಿ ಎಷ್ಟು ಬಗೆಯ ಸಾಮಾಜಿಕ ತುಮುಲವನ್ನು ಉಂಟುಮಾಡಿದೆ ಎಂಬುದು ಸಮಾಜ ಜೀವನದ ಬಗ್ಗೆ ಕಳಕಳಿಯಿರುವ ಎಲ್ಲರಿಗೂ ಅರಿವಾಗುತ್ತದೆ. ಅಂಥದೇ ಭಯಾನಕ ಸಮಾಜ ವ್ಯವಸ್ಥೆಯತ್ತ ರಶಿಯಾ ಹೋಗುತ್ತಿರುವುದು ಚಿಂತೆಯ ಸಂಗತಿಯಾಗಿದೆ.

ಕುವೈತನ್ನು ಕಬಳಿಸಿದ ಇರಾಕ್ ಇಡೀ ವಿಶ್ವವನ್ನೇ ಎದುರು ಹಾಕಿಕೊಳ್ಳು ವಷ್ಟರ ಮಟ್ಟಿಗೆ ಭಂಡತನವನ್ನು ಪ್ರದರ್ಶಿಸುತ್ತಿದೆ. ಯುದ್ಧ ಪ್ರಾರಂಭವಾದರೆ ವಿಷಾನಿಲವನ್ನು ಉಪಯೋಗಿಸುವ ಹಂತಕ್ಕೆ ರಾಕ್ಷಸತನ ಬೆಳೆಸಿಕೊಂಡಿದೆ.

ಇದೆಲ್ಲವನ್ನೂ ನೋಡಿದರೆ ೨೧ ಶತಮಾನದೊಂದಿಗೆ ಬರುವ ಭೌತಿಕ ಪ್ರಗತಿ ಮಾನವನಿಗೆ ಇನ್ನೂ ಹೆಚ್ಚು ಸಮಸ್ಯಾತ್ಮಕವಾಗಿಯೇ ಉಳಿಯುವುದೆಂಬುದರ ಕಣ್ಸನ್ನೆ ಕಾಣುತ್ತಿದೆ.

ಇಷ್ಟೆಲ್ಲ ನಿರಾಶೆಯ ಮಧ್ಯಯೂ ಒಂದು ಆಶಾಕಿರಣವಿದೆ. ಯುದ್ಧದ ಭೀಕರ ಶಸ್ತ್ರಾಸ್ತ್ರಗಳು ಹುಟ್ಟಿಕೊಂಡಷ್ಟೂ ಯುದ್ಧದ ಸಂಭವ ದೂರ ದೂರ ವಾಗುತ್ತ ಹೋಗುತ್ತದೆಂಬ ನಿಜ ಸಂಗತಿ. ಇರಾಕ್ ಮತ್ತು ಅಮೇರಿಕದ ಮಧ್ಯ ದಲ್ಲಿಯ ಕುವೈತ್ ವಿಷಯದ ಯುದ್ಧದ ಸಂಗತಿಯೇ ಇದಕ್ಕೊಂದು ಉದಾ ಹರಣೆ. ಯುದ್ಧದ ಮಾತನ್ನು ಆಡುತ್ತ ಯುದ್ಧವನ್ನು ತಪ್ಪಿಸುವ ಪ್ರಯತ್ನವೂ ಅಷ್ಟೇ ತೀವ್ರವಾಗಿ ನಡೆಯುತ್ತಿದೆ.

ವಿಜ್ಞಾನ – ಮುಖ್ಯವಾಗಿ ವಿಧ್ವಂಸಕ ಶಸ್ತ್ರಾಸ್ತ್ರಗಳು – ಮಾನವನ ಚಿಂತನೆ ಯಲ್ಲಿ ಅನಿವಾರ್ಯವಾದ ಸಂಯಮವನ್ನು ತಂದಿದೆ. ಈ ಅನಿವಾರ್ಯ ಸಂಯಮ ಜ್ಞಾನಪೂರ್ವಕವಾದ, ಸಂಸ್ಕೃತಿ ಆಧಾರವಾದ ಸಂಯಮವಾಗಿ ಪರಿಣಮಿಸಿದರೆ ಬರುವ ಒಂದೊಂದು ಹೊಸ ವರ್ಷವೂ ಮಾನವಕುಲಕ್ಕೆ ಶಾಂತಿ–ನೆಮ್ಮದಿ–ಸುಖ ತಂದೀತು.

★

ಸಹಜ ಕೃಷಿಯನ್ನು ಕುರಿತು ಜನಪದ ಸೇವಾ ಟ್ರಸ್ಟ್ ಪ್ರಕಟಿಸಿದ ಮಸ ನೊಬು ಫುಕುಕಾರ "ಒಂದು ಹುಲ್ಲಿನ ಕ್ರಾಂತಿ" ಓದುಗರಿಂದ ಒಳ್ಳೆಯ ಸ್ವಾಗತ ಪಡೆಯಿತು. ಸಹಜ ಕೃಷಿ ಪದ್ಧತಿಯನ್ನು ಕುರಿತು ಸಾಹಿತ್ಯದ ಬೇಡಿಕೆ ಸಹಜ ವಾಗಿಯೇ ಹೆಚ್ಚಾಗುತ್ತಿದೆ. ಪುರಾತನ ಪದ್ಧತಿಯಾದರೂ ಇಂದಿನ ತಾಂತ್ರಿಕ ಯುಗ ದಲ್ಲಿ ಸ್ವಾಭಾವಿಕ ವ್ಯವಸಾಯ ಪದ್ಧತಿ ಪುನಃ ಹೊಸ ವಸ್ತುವಾಗಿ ನಮಗೆ ಫುಕುಕಾರ ಮೂಲಕ ದೊರೆತಿದೆ. ರಾಸಾಯನಿಕ ಗೊಬ್ಬರಗಳಿಗಾಗಿ ನಮ್ಮ ಸರಕಾರ ಸಬ್ಸಿಡಿ ರೂಪದಲ್ಲಿ ಪ್ರತಿವರ್ಷ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ; ಇಂಥ ಪರಿಸ್ಥಿತಿಯಲ್ಲಿ ಸಹಜ ಕೃಷಿ ವರವಾಗಿಯೂ ಪ್ರಸ್ತುತವಾಗಿಯೂ ನೆರವಿಗೆ ಬರುತ್ತದೆ. ಕರ್ನಾಟಕದ ಸಹಜ ಹಾಗೂ ಜೈವಿಕ ಕೃಷಿ ಪ್ರೇಮಿಗಳ ಜ್ಞಾನ ತೃಷೆ ಹಿಂಗಿಸಲು ಟ್ರಸ್ಟ್ ಈ ಹೊಸ ವರ್ಷ ದಲ್ಲಿ ಇನ್ನೊಂದು ಪುಸ್ತಕವನ್ನು ಪ್ರಕಟಿಸಿದೆ ಶ್ರೀ ಪೂರ್ಣಚಂದ್ರ ತೇಜಸ್ವಿಯವರ "ಸಹಜ ಕೃಷಿ : ಒಂದು ಪರಿಚಯ". ಪ್ರತ್ಯಕ್ಷ ಅನುಭವದ ಲೇಖನಗಳಿಂದ ಕೂಡಿದ ಈ ಪುಸ್ತಕ ಬಹಳ ಒಳ್ಳೆಯ ಪೂರಕ ಸಾಹಿತ್ಯ. ಶ್ರೀ ಪಿ. ಲಂಕೇಶರಿಂದ ಪರಿಚಯನಾತ್ಮಕ ಲೇಖನವನ್ನೂ ಒಳಗೊಂಡಿದೆ. ಈ ಪುಸ್ತಕ ಪಡೆಯಲಿಚ್ಛಿಸುವವರು ಟ್ರಸ್ಟಿನ ಪ್ರಕಾಶನ ವಿಭಾಗಕ್ಕೆ ಬರೆಯಬಹುದು.

–ಸುರೇಂದ್ರ ಕೌಲಗಿ

ಭಾರತೀಯ ಪರಿಸರದಲ್ಲಿನ ಸೈದ್ಧಾಂತಿಕ ಒಲವುಗಳು

—ಲೇಖಕರು ರಾಮಚಂದ್ರ ಗುಹಾ

ಬಂಡವಾಳವಾದ ಮತ್ತು ಮಾರ್ಕ್ಸ್‌ವಾದಗಳೆರಡಕ್ಕೂ ವಿರೋಧವಾದ ಒಂದು ಹೊಸ ವಾದವೇ ಪುರೋಗಾಮಿ ಪರಿಸರವಾದ. ಬಂಡವಾಳವಾದಿ ಬೆಳವಣಿಗೆಗಳಿಗೆ ವಿರೋಧವಾಗಿ ಮಾರ್ಕ್ಸ್‌ವಾದವು ಹುಟ್ಟಿಕೊಂಡಿತಾದರೂ ಮಾರ್ಕ್ಸ್‌ವಾದವು ಔದ್ಯೋಗೀಕರಣದಿಂದ ಉದ್ಭವವಾದ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ಅಸಮರ್ಥವಾಯಿತು. ಮಾರ್ಕ್ಸ್‌ವಾದದ ಈ ಅಸಮರ್ಥತತೆಯೇ ಪುರೋಗಾಮಿ ಪರಿಸರವಾದ ಹುಟ್ಟಿಕೊಳ್ಳಲು ಕಾರಣ ಎಂಬುದು ಪರಿಸರವಾದಿಗಳ ನಂಬಿಕೆ.

ಉತ್ಪಾದನಾ ಸಾಧನಗಳ ಖಾಸಗಿ ಯಜಮಾನಿಕೆಯನ್ನು ಮಾರ್ಕ್ಸ್‌ವಾದ ವಿರೋಧಿಸುತ್ತದಾದರೂ ಔದ್ಯೋಗೀಕರಣದ ಮಟ್ಟಿಗೆ ಬಂಡವಾಳವಾದ ಮತ್ತು ಮಾರ್ಕ್ಸ್‌ವಾದಗಳ ನಡುವೆ ಯಾವುದೇ ವ್ಯತ್ಯಾಸ ಕಾಣುವುದಿಲ್ಲ. ಬಂಡವಾಳವಾದಿ ವ್ಯವಸ್ಥೆಯಲ್ಲಿ ಹೆಚ್ಚು ಹೆಚ್ಚಾಗಿ ಔದ್ಯೋಗೀಕರಣ ನಡೆದಂತೆಯೇ ಮಾರ್ಕ್ಸ್‌ವಾದಿ ವ್ಯವಸ್ಥೆಯಲ್ಲಿಯೂ ಸಹ ನಡೆಯುತ್ತಿದೆ. ಈ ಎರಡೂ ವ್ಯವಸ್ಥೆಗಳಲ್ಲಿ ಸ್ಥಾಪಿತವಾಗಿರುವ ಶಕ್ತಿ ಆಧಾರಿತ ಕೈಗಾರಿಕೆಗಳು ಪರಿಸರ ವಿನಾಶದ ಭೀಕರ ಗತಿಯನ್ನು ಹೆಚ್ಚಿಸುತ್ತಿವೆ. ಚೆರ್ನೊಬಿಲ್, ಬೈಕಾಲ್ ಮತ್ತು ಇತರ ನಿದರ್ಶನಗಳನ್ನು ನೋಡಿದಾಗ ಬಂಡವಾಳವಾದಕ್ಕೂ ಕೂಡ ಪರಿಸರ ವಿನಾಶದ ಬಗ್ಗೆ ಯಾವ ನಿಲುವೂ ಇಲ್ಲದಿರುವುದು ಸ್ಪಷ್ಟ. ಈ ಹಿನ್ನೆಲೆಯಲ್ಲಿ ಪುರೋಗಾಮಿ ಪರಿಸರವಾದಿಗಳು ತಮ್ಮದು **ಪರಿಸರ ಸಮಾಜವಾದ** ಎಂದು ಹೇಳಿಕೊಳ್ಳುತ್ತಾರೆ.

ಪರಿಸರ ಸಮಾಜವಾದ ಯುರೋಪಿನಲ್ಲಿ ಹುಟ್ಟಿಕೊಂಡಿತಾದರೂ ಮೂರನೇ ಜಗತ್ತಿನಲ್ಲಿ ಪರಿಸರವಾದ ಹೆಚ್ಚು ಅನಿವಾರ್ಯವಾಗುತ್ತದೆ. ಇಲ್ಲಿ ಪರಿಸರ ವಿನಾಶವು ಒಡ್ಡುವ ಸಮಸ್ಯೆ ಹೆಚ್ಚು ಭೀಕರ. ಮುಂದುವರಿದ ರಾಷ್ಟ್ರಗಳಲ್ಲಿ "ಜೀವನದ ಮಟ್ಟ"

ವನ್ನು ಹೆಚ್ಚಿಸುವ ಸಲುವಾಗಿ ಪರಿಸರವನ್ನು ಹೆಚ್ಚು ಹೆಚ್ಚು ಸುಂದರವಾಗಿ ಮಾಡುವ ಪ್ರಯತ್ನಗಳು ನಡೆದಿದ್ದರೆ ಮೂರನೇ ಜಗತ್ತಿನಲ್ಲಿ ಪರಿಸರ ವಿನಾಶ ಬಡರೈತರ, ಹಿಂದುಳಿದ ಮತ್ತು ಬುಡಕಟ್ಟು ಜನಾಂಗದ ಹಾಗೂ ಇತರರ ಜೀವನದ ಆಧಾರವನ್ನೇ ನಾಶಮಾಡುತ್ತಿದೆ. ಸಮಾಜವಾದೀ ಸಿದ್ಧಾಂತದ ಆರ್ಥಿಕ ಹಾಗೂ ಸಾಮಾಜಿಕ ಸಮಾನತೆಗೆ ಅತ್ಯವಶ್ಯಕವಾದ ಆರ್ಥಿಕ ಮರುಹಂಚಿಕೆಯನ್ನು ಪರಿಸರವಾದವೂ ಪುಷ್ಟೀಕರಿಸುತ್ತದೆ ಮತ್ತು ವರ್ಗ, ಲಿಂಗ ಹಾಗೂ ರಾಷ್ಟ್ರಗಳ ನಡುವಿನ ಸಮಾನತೆಯ ಜೊತೆಗೆ ಪೀಳಿಗೆಗಳ ನಡುವಿನ ಸಮಾನತೆಯ ಹೊಸ ಆಯಾಮವನ್ನು ಸಮಾಜವಾದ ನೀಡುತ್ತದೆ. ಮುಂದುವರಿದ ರಾಷ್ಟ್ರಗಳಲ್ಲಿ ಪರಿಸರವಾದ ಎರಡು ವಿಚಾರಧಾರೆಗಳಾಗಿದೆ : ಪರಿಸರವನ್ನು ಬಳಸುವುದು ಹಾಗೂ ಪರಿಸರವನ್ನು ರಕ್ಷಿಸುವುದು ಎಂಬುದಾಗಿ. ಭಾರತದ ಪರಿಸರವಾದಿಗಳಲ್ಲಿ ಈ ಬಗ್ಗೆ ಭಿನ್ನಾಭಿಪ್ರಾಯಕ್ಕೆ ಎಡೆ ಇಲ್ಲ. ಆದರೆ ಬಳಕೆಗಾಗಿ ಪರಿಸರ ಎಂಬುದನ್ನು ಒಪ್ಪಿರುವ ಪರಿಸರವಾದಿಗಳಲ್ಲಿ ಎರಡು ಅಭಿಪ್ರಾಯಗಳಿವೆ : ಒಂದು, ಪರಿಸರವನ್ನು ವಿನಾಶಕಾರಕವಾದ ಹೆಚ್ಚುವರಿ ಉತ್ಪನ್ನಕ್ಕಾಗಿ ಬಳಸಬೇಕೆ? ಎರಡು, ಸಾಂಪ್ರದಾಯಿಕವಾಗಿ ಮಾನವನ "ಜೀವನೋಪಾಯಕ್ಕಾಗಿ" ಬಳಸಬೇಕೆ? ಎಲ್ಲೆಲ್ಲಿ ಪರಿಸರ ವಿನಾಶ ನಡೆದಿದೆಯೋ ಅಲ್ಲೆಲ್ಲಾ ಜನರು ಹೆಚ್ಚು ಬಡವರಾಗಿರುವುದನ್ನು ನಾವು ಕಾಣಬಹುದು. ಇದರಿಂದಾಗಿ ಈಗಿನ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳ ಪುನರ್ ವಿಮರ್ಶೆ ಅತ್ಯಗತ್ಯ.

ಭಾರತದಲ್ಲಿ ಇದೇ ಹಿನ್ನೆಲೆಯಲ್ಲಿ ಪರಿಸರವಾದ ಮೂರು ವಿಭಿನ್ನ ರೀತಿಯ ಚಳವಳಿಗಳಾಗಿ ರೂಪುಗೊಂಡಿದೆ :-

ಮೊದಲನೆಯದು, ಚಳವಳಿಯುಕ್ತ ಗಾಂಧೀವಾದ; ಎರಡನೆಯದು, ಸೂಕ್ತ ತಂತ್ರಜ್ಞಾನದ ಮಾರ್ಗ; ಮೂರನೆಯದು, ಮಾರ್ಕ್ಸ್‌ವಾದಿಗಳು ಹಾಕಿಕೊಂಡಿರುವ ಮಾರ್ಗ.

ಚಳವಳಿನಿರತ ಗಾಂಧೀವಾದಿಗಳು ಹೆಚ್ಚಾಗಿ ಧಾರ್ಮಿಕ ರೀತಿನೀತಿಗಳನ್ನು ಎತ್ತಿ ಹಿಡಿಯುತ್ತಾ ಆಧುನಿಕ ಜೀವನ ಮಾರ್ಗವನ್ನು ತಿರಸ್ಕರಿಸುತ್ತಾರೆ. ಇವರು ರಾಜ್ಯಶಾಹಿಯ ಕಾಲದಲ್ಲಿದ್ದ ಹಳ್ಳಿಯನ್ನೆ ಪರಿಸರ ಹಾಗೂ ಸಾಮಾಜಿಕ ಹೊಂದಾಣಿಕೆಯ ಅಗತ್ಯತೆಯನ್ನು ಪ್ರತಿಬಿಂಬಿಸುವ ಮಾದರಿಯನ್ನಾಗಿ ಎತ್ತಿ ಹಿಡಿಯುತ್ತಾರೆ. ಇವರು ಅನುಸರಿಸುವ ಮಾರ್ಗ ಉಪವಾಸ ಹಾಗೂ ಪಾದಯಾತ್ರೆಗಳು. ಇವುಗಳನ್ನು ಬಳಸಿ ಆಧುನಿಕ ಪರಿಸರದ ಬಗೆಗಿನ ಅರಿವನ್ನು ಮೂಡಿಸಲು ಯತ್ನಿಸುತ್ತಾರೆ.

ಸೂಕ್ತ ತಂತ್ರಜ್ಞಾನ ಪ್ರತಿಪಾದದ ತಜ್ಞರು ಔದ್ಯೋಗೀಕೃತ ಸಮಾಜದ ಬಗ್ಗೆ ತೀವ್ರ ವಿರೋಧವನ್ನು ವ್ಯಕ್ತಪಡಿಸುವುದಿಲ್ಲ. ಇವರು ವ್ಯವಸಾಯ ಮತ್ತು

ಕೈಗಾರಿಕೆ, ಬೃಹತ್ ಹಾಗೂ ಸಣ್ಣ ಉದ್ದಿಮೆ, ಪಾಶ್ಚಾತ್ಯ ಹಾಗೂ ಈಶಾನ್ಯ ವಿಧಾನಗಳೆಲ್ಲವನ್ನು ಸಮನ್ವಯಗೊಳಿಸುವ ಪ್ರಯತ್ನ ನಡೆಸಿದ್ದಾರೆ.

ವಿಚಾರದಲ್ಲಿ ಸಮಾಜವಾದಕ್ಕೆ ಹತ್ತಿರವಾದ ಮಾರ್ಗವನ್ನು ಅನುಸರಿಸುತ್ತಿರುವವರು ಸೂಕ್ತ ತಂತ್ರಜ್ಞಾನವಾದಿಗಳೆಂದೇ ಹೇಳಬೇಕು. ಇವರು ಪರಿಸರದ ರಕ್ಷಣೆಯ ಜೊತೆಗೆ ಸಾಮಾಜಿಕ ಸಮಾನತೆಯನ್ನು ಹರಡುವಂತಹ ತಂತ್ರಜ್ಞಾನವನ್ನು ಕಂಡು ಹಿಡಿಯುವಲ್ಲಿ ಹಾಗೂ ಬಳಸುವಲ್ಲಿ ಮಹತ್ತರ ಕಾರ್ಯವನ್ನು ನಡೆಸಿದ್ದಾರೆ.

ಪರಿಸರ ಮಾರ್ಕ್ಸ್‌ವಾದಿಗಳು ರಾಜಕೀಯ ಸಿದ್ಧಾಂತದ ಬಗ್ಗೆ ಹೆಚ್ಚಿನ ಗಮನ ಹರಿಸಿ ನಂತರ ಪರಿಸರದತ್ತ ಗಮನ ನೀಡಿದ್ದಾರೆ. ಇವರು ಹೆಚ್ಚಾಗಿ ಜನರಿಗೆ ವಿಜ್ಞಾನವನ್ನು ಮುಟ್ಟಿಸುತ್ತಾ ಪರಿಸರದ ಬಗೆಗಿನ ತಿಳಿವನ್ನು ಸಹ ಒಂದು ಭಾಗವನ್ನಾಗಿಸಿಕೊಂಡಿದ್ದಾರೆ. ಇವರಲ್ಲಿ ಸಾಂಪ್ರದಾಯಿಕತೆಯ ಬಗ್ಗೆ ಮಾರ್ಕ್ಸ್‌ವಾದಿಗಳಿಗಿರುವ ದ್ವೇಷವನ್ನು ಕಾಣಬಹುದು. ಇವರು ಮಾರ್ಕ್ಸ್ ಹೇಳುವ ವರ್ಗ ಸಂಘರ್ಷದ ನಂತರ ಸ್ಥಾಪನೆಯಾಗುವ ಸಮಾನತೆಗೆ ಅನುಗುಣವಾಗಿ ಪರಿಸರ ತಾಂತ್ರಿಕ ಪರ್ಯಾಯಗಳು ಸಾಧ್ಯ ಎಂದು ನಂಬುತ್ತಾರೆ.

ಈ ಮೂರು ವಾದಗಳಲ್ಲಿ ಚಳವಳಿನಿರತ ಗಾಂಧೀವಾದಿಗಳು ಸಾಂಪ್ರದಾಯಿಕ ಸಮಾಜದಲ್ಲಿನ ಅಸಮಾನತೆಯನ್ನು ನಿರ್ಲಕ್ಷಿಸಿದರೆ, ಮಾರ್ಕ್ಸ್‌ವಾದಿಗಳು ಅಸಮಾನತೆಯ ವಿರುದ್ಧ ಹೋರಾಟವನ್ನು ಮುಖ್ಯವಾಗಿ ಕಾಣುತ್ತಾರೆ, ಸೂಕ್ತ ತಂತ್ರಜ್ಞಾನದ ವಾದಿಗಳು ವರ್ಗ ಸಂಘರ್ಷವನ್ನು ಅಪೇಕ್ಷಿಸುವುದಿಲ್ಲ : ಗಾಂಧೀವಾದಿಗಳು ಪರಿಸರಕ್ಕೆ ಪೂರಕವಾದ ತಂತ್ರಜ್ಞಾನವನ್ನು ಒಪ್ಪಿಕೊಂಡರೂ ಸಹ ತಂತ್ರಜ್ಞಾನ ಹಾಗೂ ವಿಜ್ಞಾನಗಳು ಮಾನವನನ್ನು ಹೀನಾಯ ಸ್ಥಿತಿಗಿಳಿಸಲು ಸಹಾಯ ಮಾಡುತ್ತವೆಂದು ವಾದಿಸುತ್ತಾರೆ. ಮಾರ್ಕ್ಸ್‌ವಾದಿಗಳು ಬಂಡವಾಳವಾದಿಗಳಂತೆಯೇ ವಿಜ್ಞಾನ ಮತ್ತು ವೈಜ್ಞಾನಿಕ ವಿಚಾರಗಳೇ ಒಂದು ಹೊಸ ಸಮಾಜವನ್ನು ಸೃಷ್ಟಿಸಲು ಮುಖ್ಯ ಎಂದು ನಂಬುತ್ತಾರೆ. ಆದರೆ ಸೂಕ್ತ ತಂತ್ರಜ್ಞಾನವಾದಿಗಳು ನೈಜತೆಯನ್ನು ಒಪ್ಪಿಕೊಂಡು ನವೀನ ಹಾಗೂ ಸಾಂಪ್ರದಾಯಿಕ ಜ್ಞಾನಗಳೆರಡನ್ನು ಬಳಸಿ ಪರಿಸರ ದೃಢತೆಯನ್ನು ಸಾಧಿಸುವ ಮೂಲಕ ಸಾಮಾಜಿಕ ನ್ಯಾಯ ಹಾಗೂ ಸ್ವಾಯತ್ತತೆ ಎರಡನ್ನೂ ಸಾಧಿಸಲು ಯತ್ನಿಸುತ್ತಾರೆ.

ಇಂದಿನ ಪರಿಸ್ಥಿತಿಯಲ್ಲಿ ಪರಿಸರವಾದಿಗಳು ಮೂರೂ ನಿಟ್ಟಿನಲ್ಲಿ ಯೋಚಿಸಬೇಕಾಗಿದೆ. ಸೂಕ್ತ ತಂತ್ರಜ್ಞಾನವಾದಿಗಳು ಸಂಪನ್ಮೂಲಗಳ ಉಳಿಕೆಯ ಹಾಗೂ ಸಾಮಾಜಿಕ ನ್ಯಾಯ ದೊರಕಿಸುವ ತಂತ್ರಜ್ಞಾನದ ಮಾರ್ಗವನ್ನು ಸೂಚಿಸಿದ್ದಾರೆ.

೧೦ ನೇ ಪುಟ ನೋಡಿ

ರಾಷ್ಟ್ರೀಯ ಉದ್ಯೋಗಗಳು

– ಜೆ. ಸಿ. ಕುಮಾರಪ್ಪ

(ಜೆ.ಸಿ. ಕುಮಾರಪ್ಪ ಪಾಶ್ಚಿಮಾತ್ಯ ಅರ್ಥಶಾಸ್ತ್ರ ಓದಿ ನಂತರ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿದ್ದ ಓರ್ವ ವಿಚಾರವಂತ ವ್ಯಕ್ತಿ. ಅವರು ಗಾಂಧೀಜಿಯವರ ವಿಚಾರಗಳಿಗೆ ಮುಖ್ಯವಾಗಿ, ಆರ್ಥಿಕ ವಿಚಾರಗಳಿಗೆ, ಒಂದು ಸ್ವರೂಪ ಕೊಟ್ಟರು. ಅದನ್ನು ಅವರು 'ಶಾಶ್ವತ ಅರ್ಥಶಾಸ್ತ್ರ' ಎಂದು ಕರೆದರು. ಈ ಅರ್ಥಶಾಸ್ತ್ರಕ್ಕೂ ಈಗ ಪ್ರಚಲಿತವಿರುವ ಅರ್ಥಶಾಸ್ತ್ರಕ್ಕೂ ಇರುವ ವ್ಯತ್ಯಾಸ ನಮಗೆ ತಿಳಿದರೆ ಅದರಿಂದ ಬಹಳ ಪ್ರಯೋಜನವುಂಟು. ಅದಕ್ಕಾಗಿ ಆ ಪುಸ್ತಕದ ಭಾಗಗಳನ್ನು ಕ್ರಮಶಃ ಪ್ರಕಟಿಸಲಾಗುತ್ತಿದೆ. ಅನುವಾದ : ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ.—ಸಂ.)

ಉದ್ಯೋಗಗಳನ್ನು ಹೇಗೆ ರೂಪಿಸಬೇಕು, ಹೇಗೆ ನಡೆಸಬೇಕು ಎಂಬ ಪ್ರಶ್ನೆಗೆ ಬಂದೆವು. ಅರ್ಥಶಾಸ್ತ್ರದಲ್ಲಿ ನಾವು ನೆನಪಿಡಬೇಕಾದುದು ಎರಡು ಮುಖ್ಯ ತತ್ವ – ಧನಸಂಗ್ರಹ, ಧನವಿಭಾಜನ.

ಕೇಂದ್ರೀಯ ಉದ್ಯೋಗಗಳು ಕೇಂದ್ರಾಪಗಮನ ಯಂತ್ರಗಳಿದ್ದ ಹಾಗೆ. ಎಲ್ಲವೂ ಕೇಂದ್ರದಿಂದ ಹೊರಗೆ ಹರಿಯಬೇಕು. ಇದರಿಂದ ಕೆಲವೇ ಕೈಯಲ್ಲಿ ಐಶ್ವರ್ಯ ಸಂಗ್ರಹವಾಗುತ್ತದೆ. ಹಣವಾದರೂ ಕೇಂದ್ರಿತವಾಗಬಹುದು, ಅಧಿಕಾರವಾದರೂ ಆಗಬಹುದು. ವಿಕೇಂದ್ರಿತ ಉದ್ಯೋಗಗಳು ಸ್ವಾಭಾವಿಕವಾಗಿಯೆ ಐಶ್ವರ್ಯವನ್ನು ಹಂಚುತ್ತವೆ. ನಮ್ಮ ದೇಶದಲ್ಲಿ ಐಶ್ವರ್ಯ ಕೆಲವೇ ಕಡೆ ಕೇಂದ್ರಿತವಾಗಬಾರದು ಎನ್ನುವಂತಿದ್ದರೆ ಕೇಂದ್ರೀಯ ಉದ್ಯೋಗಗಳನ್ನು ಮೊದಲು ನಾಶ ಮಾಡಬೇಕು. ನಮ್ಮದು ಬಡ ದೇಶ. ನಮಗೆ ಬೇಕಾದುದು ಐಶ್ವರ್ಯದ ಹಂಚಿಕೆ. ಆದುದರಿಂದ ನಾವು ವಿಕೇಂದ್ರಿತ ಉದ್ಯೋಗಗಳನ್ನೆ ಅವಲಂಬಿಸಬೇಕು.

ಇದಕ್ಕೆ ಇನ್ನೊಂದು ಮಾರ್ಗವೂ ಇದೆ. ರಷ್ಯಾ ಅದನ್ನು ಮಾಡಿದೆ. ಮೊದಲು ಒಂದು ಕೇಂದ್ರದಲ್ಲಿ ಐಶ್ವರ್ಯವನ್ನು ಉತ್ಪತ್ತಿ ಮಾಡಿ, ಆಮೇಲೆ ಸರಕಾರದ ಮೂಲಕ ಅದನ್ನು ದೇಶದಲ್ಲಿ ಹಂಚುತ್ತೇವೆ ಎನ್ನುತ್ತಾರೆ. ಅಲ್ಲಿ ಕೇಂದ್ರಿತ

ಹಾಗುವುದು ಐಶ್ವರ್ಯವಲ್ಲ, ಅಧಿಕಾರ. ಐಶ್ವರ್ಯ ಉತ್ಪತ್ತಿಯಾದ ಮೇಲೆ ಅದನ್ನು ಹಂಚುವವರು ಯಾರು? ಅಧಿಕಾರವಿರುವವರು ತಾನೆ? ಆದುದರಿಂದ ಅಧಿಕಾರವಾಗಲಿ ಐಶ್ವರ್ಯವಾಗಲಿ ಯಾವುದು ಕೇಂದ್ರಿತವಾದರೂ ಅಪಾಯವೇ. ಅಮೆರಿಕಾ, ಇಂಗ್ಲೆಂಡುಗಳಲ್ಲಿ ಐಶ್ವರ್ಯ ಕೇಂದ್ರಿತವಾಗಿದೆ. ರಷ್ಯಾದಲ್ಲಿ ಅಧಿಕಾರ ಕೇಂದ್ರಿತವಾಗಿದೆ. ಹಿಂದೂಸ್ಥಾನ ಬಡದೇಶ. ಇಲ್ಲಿ ಐಶ್ವರ್ಯೋತ್ಪತ್ತಿಯೂ ಆಗಬೇಕು; ಉತ್ಪತ್ತಿ ಮಾಡುವ ಕ್ರಮದಲ್ಲಿಯೇ ಹಂಚಿಕೆಯೂ ಆಗಬೇಕು. ಎಲ್ಲಿ ನಮಗೆ ದಿನಬಳಕೆಯ ಪದಾರ್ಥಗಳ ಉತ್ಪತ್ತಿಬೇಕೋ ಅಲ್ಲಿ ಕೇಂದ್ರೀಯ ಉತ್ಪಾದನಾ ಕ್ರಮ ಸಲ್ಲದು, ಅದು ವರ್ಜ್ಯ.

ಕೇಂದ್ರಿಯ ಉದ್ಯೋಗ ಸ್ಥಾನ : ಲಾಭದಾಸೆಯಿಲ್ಲದ ಜನ, ಐಶ್ವರ್ಯ ಸಂಗ್ರಹ ಮಾಡದ ಜನ ಇದ್ದಲ್ಲಿ ಕೇಂದ್ರೀಯ ಉದ್ಯೋಗಗಳಿರಬೇಕು. ಅಥವಾ ಕೇಂದ್ರೀಯ ಉದ್ಯೋಗಗಳಲ್ಲಿ ಇರುವ ಐಶ್ವರ್ಯ ಸಂಗ್ರಹ ಗುಣವನ್ನು ಮೊಟಕು ಮಾಡಬೇಕು. ಹೇಗೆ ಮಾಡುವುದು? ಈ ಉದ್ಯೋಗಗಳೆಲ್ಲವೂ ಸೇವಾ–ಪ್ರಧಾನವಾಗಬೇಕು. ವಿದ್ಯುತ್ತು ಸಾಗಾಣಿಕೆ, ಅಂಚೆ–ತಂತಿ, ಸುದ್ದಿ–ಸಮಾಚಾರ, ರಸ್ತೆ ದುಂತಾದುವೆಲ್ಲ ಸೇವಾಕಾರ್ಯವಾಗಬೇಕು. ನಿಃಸ್ವಾರ್ಥಿಗಳ ಸರಕಾರ ಅವನ್ನು ನಡೆಸಬೇಕು. ನಮಗೆ ಮೋಟಾರು ವಿಮಾನ ಬೇಕು ಎಂದರೆ ಸರಕಾರ ಅದನ್ನು ನಿರ್ಮಿಸಬೇಕು. ಸರಕಾರ ನಡೆಸುವ ಉದ್ಯೋಗಗಳಲ್ಲಿ ನಷ್ಟ, ವ್ಯರ್ಥ ಹೆಚ್ಚು ಎನ್ನಬಹುದು. ಸ್ವಲ್ಪಮಟ್ಟಿಗೆ ವ್ಯರ್ಥವಾದರೂ ಚಿಂತೆಯಿಲ್ಲ. ಹಾಗಲ್ಲದೆ ಐಶ್ವರ್ಯ ಸಂಗ್ರಹವಾಗಲು ಅವಕಾಶ ಕೊಟ್ಟರೆ ಅಪಾರ ವ್ಯರ್ಥವಾಗುತ್ತದಲ್ಲ. ಈ ಯುದ್ಧಗಳೆಲ್ಲ ಐಶ್ವರ್ಯ–ಅಧಿಕಾರಿಗಳ ಸಂಗ್ರಹದ ಫಲ. ಅಧಿಕಾರ, ಐಶ್ವರ್ಯಗಳ ಸಂಗ್ರಹ ಕೇಂದ್ರೀಯ ಉತ್ಪಾದನೆಯ ಪರಿಣಾಮ. ಕಳೆದ ಕೆಲವು ವರ್ಷಗಳಲ್ಲಿ ಎಷ್ಟು ಐಶ್ವರ್ಯ ಹಾಳಾಯಿತೋ ನೋಡಿ.

ಅನಿವಾರ್ಯವಾದರೆ ಮಾತ್ರ ಕೇಂದ್ರೀಯ ಉದ್ಯೋಗವಿರಲಿ. ಇಲ್ಲದಿದ್ದರೆ ಬೇಡ. ಇದು ವಿಷವಿದ್ದಂತೆ. ವಿಷವೂ ಒಂದೊಂದು ಸಲ ಔಷಧವಾಗುತ್ತದೆ. ನೀವು ಕೊಯಿನಾ ತೆಗೆದುಕೊಳ್ಳುತ್ತೀರಿ. ವೈದ್ಯರು ಹೇಳಿದ ರೀತಿ ಸ್ವಲ್ಪ ಪ್ರಮಾಣದಲ್ಲಿ ತೆಗೆದುಕೊಂಡರೆ ವಿಷವೂ ಹಿತವೇ. ವಿಷದಂಥ ಕೇಂದ್ರೀಯ ಉದ್ಯೋಗವನ್ನು ಸ್ಥಾಪಿಸಲೇಬೇಕಾದ ಪಕ್ಷದಲ್ಲಿ, ಅದಕ್ಕೊಂದು ಕೆಂಪು ಚೀಟಿ ಅಂಟಿಸಿ ವೈದ್ಯರು ಹೇಳಿದಷ್ಟು ಅದೇ ರೀತಿ ತೆಗೆದುಕೊಳ್ಳಬಹುದು! ಇಲ್ಲದಿದ್ದರೆ ಆಪತ್ತು ಸಿದ್ಧ. ಕೇಂದ್ರೀಯ ಉದ್ಯೋಗಗಳು ಸ್ವಭಾವತಃ ಸಮಾಜ–ಕಂಟಕಗಳು. ಆದುದರಿಂದ ಅವುಗಳ ವ್ಯಾಪ್ತಿಯನ್ನು ಪರಿಮಿತಿಗೊಳಿಸಬೇಕು. ಹೇಗೆ? ಸಮಾಜಕ್ಕೆ ಇದು ಬೇಕೇ ಬೇಕು ಎಂಬಂತಿದ್ದರೆ ಆ ಉದ್ಯೋಗದ ಸ್ವಭಾವವೇ ಸರ್ವಮಾನ್ಯದ್ದಾದರೆ ಆಗ ಅದನ್ನು ಕೈಗೊಳ್ಳಿ. ಉದಾ : ನೀರಿನ ಸರಬರಾಜು. ಸರಕಾರವೆ ನೀರಿನ ಸರಬ

ರಾಜು ಮಾಡಬೇಕು. ಹೀಗೆ ದೀರ್ಘ ದೃಷ್ಟಿಯ ಕೆಲಸಗಳನ್ನು ಸರಕಾರಕ್ಕೆ ವಹಿಸಬೇಕು.

ವೆಚ್ಚ-ಲಾಭ : ಕೆಲವರು ಬೆಲೆಯ ಮಾತನ್ನು ಆಡುತ್ತಾರೆ. ಕೇಂದ್ರೀಯ ಉದ್ಯೋಗಗಳಾದರೆ ಉತ್ಪಾದನೆ ಅಗ್ಗವಾಗುತ್ತದೆ. ಆದುದರಿಂದ ಕೇಂದ್ರೀಯ ಉದ್ಯೋಗಗಳು ಉತ್ತಮ ಎನ್ನುತ್ತಾರೆ. ಯಾವಾಗಲೂ ಹೀಗೆ ಅಲ್ಲ. ರೈಲು, ಅಂಚೆ-ತಂತಿ, ವಿದ್ಯುತ್ತು, ನೀರಾವರಿ – ಇಂಥವು ಸಹಜವಾಗಿಯೆ ಏಕಾಧಿಕಾರದಲ್ಲಿರಬೇಕು. ಇವು ಸಾರ್ವಜನಿಕ ಸೌಕರ್ಯಕ್ಕಾಗಿ ಲಾಭದೃಷ್ಟಿಯಿಲ್ಲದೆ ಸೇವಾರ್ಥ ನಡೆಸಲ್ಪಡಬೇಕು. ಸರಕಾರ ಇವನ್ನು ನಡೆಸಿದರೆ ಲಾಭದೃಷ್ಟಿ ಹೋಗುತ್ತದೆ. ಖಾಸಗಿಯವರು ಮಾಡಿದರೆ ಲಾಭವೆ ಮುಖ್ಯ.

ಖಾಸಗಿ ವ್ಯಕ್ತಿಗಳಿಗೆ ಲಾಭವೇ ಮುಖ್ಯೋದ್ದೇಶ. ಬೆಲೆ ಅಥವಾ ವೆಚ್ಚ ಹೆಚ್ಚಾದರೆ ಲಾಭ ಕಡಿಮೆ. ಬೆಲೆ ಕಡಮೆಯಾದರೆ ಲಾಭ ಹೆಚ್ಚು. ಆದುದರಿಂದ ಕೇಂದ್ರೀಯ ಉದ್ಯೋಗಗಳಲ್ಲಿ ಸಾಧ್ಯವಾದಷ್ಟು ವೆಚ್ಚವನ್ನು ತಗ್ಗಿಸುತ್ತಾರೆ. ಇದಕ್ಕೆ ಸುಲಭವಾದ ಉಪಾಯ ಕಡಮೆ ಕೂಲಿ ಕೊಡುವುದು, ಕಚ್ಚಾಮಾಲನ್ನು ಅಗ್ಗವಾಗಿ ಕೊಳ್ಳುವುದು, ಮೇಲ್ವಿಚಾರಣೆಯ ವೆಚ್ಚವನ್ನು ತಗ್ಗಿಸುವುದು. ಕಡಿಮೆ ಕೂಲಿ, ಅಗ್ಗದ ಮಾಲು ಆದರೆ ಆ ಉದ್ಯೋಗದ ವ್ಯವಸ್ಥಾಪಕ-ಮಾಲಿಕ ಭಾಗ್ಯವಂತನಾದ; ಉಳಿದವರು ಬಡವರಾದರು. ಐಶ್ವರ್ಯದ ವಿಷಮ ವಿಭಾಜನೆ ತಲೆತೂರಿಸುತ್ತದೆ.

ಗ್ರಾಮೋದ್ಯೋಗಗಳಲ್ಲಿ ಹೀಗಿಲ್ಲ. ಧಾರಣೆ ಹೆಚ್ಚಾದರೂ ಲಾಭದ ಮಾತಿಲ್ಲ. ಪ್ರತಿಯೊಬ್ಬರಿಗೂ ಸರಿಯಾದ ಪಾಲು ಸಿಗುತ್ತದೆ. ಆದುದರಿಂದ ಗ್ರಾಮೋದ್ಯೋಗಗಳಲ್ಲಿ ಧಾರಣೆ ಹೆಚ್ಚಾದರೂ ಚಿಂತಿಸಬೇಕಾಗಿಲ್ಲ. ನಾವು ಮಾಡಬೇಕಾದುದು ಒಂದು ಕಡೆ ಐಶ್ವರ್ಯ ಹೆಚ್ಚು, ಉಳಿದೆಲ್ಲ ಕಡೆ ಬರಿಗೈ ಆಗದಂತೆ ನೋಡಿಕೊಳ್ಳುವುದು.

ಬೆಲೆಯ ನಿಯಂತ್ರಣ : ಬೆಲೆಯ ನಿಗದಿಯಲ್ಲಿ ಭಾರಿ ಉದ್ಯೋಗಗಳನ್ನೂ ಅಲ್ಪೋದ್ಯೋಗಗಳನ್ನೂ ಒಂದೇ ರೀತಿ ಕಾಣಬಾರದು. ನಿಯಂತ್ರಣ ಮಾಡುವ ಮುನ್ನ ಆ ಉದ್ಯೋಗದ ಲಕ್ಷಣವೇನೆಂಬುದನ್ನು ಅರಿತುಕೊಳ್ಳಬೇಕು. ಎಲ್ಲಾ ಕ್ಷೇತ್ರಗಳಲ್ಲಿಯೂ ನಿಯಂತ್ರಣ ಒಳ್ಳೆಯದಲ್ಲ. ಒಂದು ಉದ್ಯೋಗ ಸಮಾಜ ಕಂಟಕವಾಗಿದ್ದರೆ ಅದು ಕೇಂದ್ರೀತವಾಗಬಾರದು. ಇದು ಭಾರಿ ಉದ್ಯೋಗಕ್ಕೆ ಯೋಗ್ಯವೆ ಅಲ್ಲವೆ ಎಂಬುದನ್ನು ನಿರ್ಧರಿಸುವುದು ಅದರ ಲಕ್ಷಣ: ಅದು ಸಮಾಜ ಕಂಟಕಅಲ್ಲವೆ?

ಸ್ವಾಭಾವಿಕವಾಗಿಯೆ ಸರ್ವಮಾನ್ಯ, ಏಕಾಧಿಕಾರದ ಲಕ್ಷಣದ ಉದ್ಯೋಗಗಳಿರುತ್ತದೆ. ಅಲ್ಲಿ ಹೇರಳವಾಗಿ ಬಂಡವಾಳವೂ ಬೇಕು. ಅಂಥವು ಕೇಂದ್ರೀಯ ಉದ್ಯೋಗಗಳಾಗಲಿ, ಉದಾ : ಕಲ್ಲಿದ್ದಲು ಗಣಿಗಳು, ರೈಲು ಮುಂತಾದವಕ್ಕೆ ಬಹಳ ಬಂಡವಾಳಬೇಕು, ಹೆಚ್ಚು ಜನ ಕೆಲಸಗಾರರು ಬೇಕು. ಅಂಥ ಉದ್ಯೋಗಗಳನ್ನು ಖಾಸಗಿ ಜನಕ್ಕೆ ಬಿಡಬಾರದು; ಸರಕಾರವೇ ನಡೆಸಬೇಕು.

ಉದ್ಯೋಗದಲ್ಲಿ ಪ್ರಜಾತಂತ್ರ : ಬಟ್ಟೆ ಗಿರಣಿಗಳಲ್ಲಿ ಸಾವಿರಾರು ಜನ ಒಬ್ಬ ನಿರಂಕುಶ ಯಜಮಾನನ ಕೈ ಕೆಳಗೆ ಕೆಲಸ ಮಾಡುತ್ತಾರೆ. ಆದುದರಿಂದ ಅವು ಪ್ರಜಾತಂತ್ರಕ್ಕೆ ವಿರುದ್ಧ. ಅವನು ಹೇಳಿದುದೇ ಶಾಸನ ; ಅದನ್ನು ನಡಸಲೇಬೇಕು. ಇಂಥ ಅಸಾಮಾಜಿಕ ವ್ಯವಸ್ಥೆಗೆ ಪ್ರಜಾತಂತ್ರದಲ್ಲಿ ಎಡೆಯಿಲ್ಲ. ಎಲ್ಲೆಲ್ಲೂ ಶುದ್ಧ ಪ್ರಜಾತಂತ್ರವಿರಬೇಕು. ರಾಜಕೀಯ ದೃಷ್ಟಿಯಿಂದಲೂ ಕೇಂದ್ರೀಯ ಉದ್ಯೋಗ ಗಳು ಸರಿಯಲ್ಲ.

ನಮಗೆ ಬೇಕಾದುದು ಸಹಕಾರಿ ಸಮಾಜ. ಸ್ಪರ್ಧೆ ಎಂದರೆ ಬಲಾಬಲಗಳ ಹಿಂಸಾ ರೀತಿ. ಅದು ನಮಗೆ ಬೇಡ. ನಮ್ಮ ಗುರಿ ಸಹಕಾರ ; ಸ್ಪರ್ಧೆಯು ವಿನಾ ಶನ. ಸುಮ್ಮನೆ ಧಾರಣೆ ನಿಗದಿ ಮಾಡಿದ ಮಾತ್ರಕ್ಕೇ ಸ್ಪರ್ಧೆ ಸಾಯದು.

ರೋಗಿಗಳ ಸ್ಥಿತಿಯನ್ನು ಪರೀಕ್ಷಿಸಿ ವೈದ್ಯ ಅತ್ಯಲ್ಪ ಪ್ರಮಾಣದಲ್ಲಿ ವಿಷವನ್ನೆ ಔಷಧವಾಗಿ ಕೊಡುವಂತೆ ಪ್ರತಿಯೊಂದು ಉದ್ಯೋಗವನ್ನೂ ಪರೀಕ್ಷಿಸಿ, ಅದನ್ನು ಕೇಂದ್ರೀಕರಿಸಿದರೆ ಒಳ್ಳೆಯದೋ ಕೆಟ್ಟುದೋ ನೋಡಬೇಕು. ಕೇಂದ್ರೀಕರಣ ಬೇಡ ಎಂದರೆ ಯಂತ್ರವೇ ಬೇಡ. ಮನುಷ್ಯ ಯಂತ್ರದ ಕೈಗೊಂಬೆ, ಅಡಿಯಾಳು ಆಗ ಬಾರದು, ಅಷ್ಟೇ. ಯಂತ್ರ ಮನುಷ್ಯನ ಕೈಮೀರಿದರೆ ಹಿಂಸೆ ಖಂಡಿತ.

ಹಿಂಸೆ–ಶಾಂತಿ : ಅರ್ಥಶಾಸ್ತ್ರದ ಪುಸ್ತಕಗಳಲ್ಲಿ ಬಯಕೆ–ಪೂರಯಿಕೆಗಳ ತತ್ವ ವನ್ನು ಓದುತ್ತೇನೆ. ಆದರೆ ವಾಸ್ತವ ಜಗತ್ತಿನಲ್ಲಿ, ಅದರಲ್ಲಿಯೂ ಸ್ಪರ್ಧಾಮಯ ಲೋಕದಲ್ಲಿ, ಅಂಥ ನಿಯಮ ಯಾವುದೂ ಕಾಣಬರುತ್ತಿಲ್ಲ. ಒಂದು ಯಂತ್ರ ವಿದ್ದರೆ ಅದರ ಶಕ್ತಿಯಿದ್ದಷ್ಟೂ ಅದು ಉತ್ಪತ್ತಿ ಮಾಡಬೇಕು. ಉದಾ ; ಒಂದು ಚಪ್ಪಲಿ ಕಾರಖಾನೆ. ೩೦೦ ಜೊತೆ ಚಪ್ಪಲಿಗಳನ್ನು ಜನ ಬಯಸುತ್ತಾರೆ. ಆದರೆ ೫೦೦ ಜೊತೆ ಚಪ್ಪಲಿಗಳನ್ನು ಮಾಡಿದರೇನೆ ಕಾರಖಾನೆಗೆ ಲಾಭ ಸಿಗುವುದು. ಉತ್ಪಾದನದ ವೆಚ್ಚ ಕಡಮೆಯಾಗಬೇಕಾದರೆ ೫೦೦ ಜೊತೆ ಮೆಟ್ಟನ್ನು ಮಾಡಲೇ ಬೇಕು; ೫೦೦ ಕ್ಕೆ ಗಿರಾಕಿ ಇರಲಿ ಇಲ್ಲದಿರಲಿ ಕಾರಖಾನೆ ಒಡೆಯನಿಗೆ ಬೇಕಾದುದು ಲಾಭ. ಆದುದರಿಂದ ಆದಷ್ಟೂ ಉತ್ಪಾದನದ ವೆಚ್ಚ ಕಡಮೆಯಿರಬೇಕೆಂದು ಅವನ ಪ್ರಯತ್ನ. ಗಿರಾಕಿಯಿರಲಿ ಬಿಡಲಿ, ೫೦೦ ಜೊತೆ ಮೆಟ್ಟನ್ನು ಅವನು ಮಾಡಿಸಿಯೆ ಮಾಡಿಸುತ್ತಾನೆ. ಆಗ ಅವನ ವೆಚ್ಚ ತಳಕ್ಕೆ ಬರುತ್ತದೆ. ಆಮೇಲೆ ಅವಕ್ಕೆ ಗಿರಾಕಿ ಯನ್ನು ಹುಡುಕುತ್ತಾನೆ. ಹೀಗೆ ಯಂತ್ರದ ವೇಗ-ಶಕ್ತಿಗಳಿಗೆ ಮನುಷ್ಯ ಗುಲಾಮ ನಾಗುತ್ತಾನೆ. ಬಯಕೆ–ಬೇಡಿಕೆಗಳ ಗೊಡವೆಯೆ ಇಲ್ಲ. ಆಗ ಪೇಟೆಯ ಬೇಟೆ, ಗಿರಾಕಿಗಳ ಶೋಧನೆ ನಡೆಯಬೇಕು. ಈ ಹೆಚ್ಚಿನ ಜೊತೆಗಳಿಗೆ ಅದಕ್ಕಾಗಿ ಯುದ್ಧ. ಮೊದಲು ಉತ್ಪಾದನೆ, ಆಮೇಲೆ ಕೈಯಲ್ಲಿ ಕತ್ತಿ, ಬಾಯಲ್ಲಿ ವ್ಯಾಪಾರ – ಹೀಗೆ ಗಿರಾಕಿಗಳನ್ನು ಹುಡುಕುವುದು. ಕೊಳ್ಳುತ್ತೀಯೋ ಕೊಲ್ಲಲೋ? ಯುದ್ಧಗಳಿಗೆಲ್ಲ

ಈ ಕೇಂದ್ರೀಯ ಉದ್ಯೋಗಗಳೇ ಕಾರಣ ಎಂಬುದು ಸ್ಪಷ್ಟ. ಆದುದರಿಂದ ಈ ಭಾರಿ ಉದ್ಯೋಗಗಳಿಗೆ ಒಂದು ಮಿತಿಯನ್ನು ಕಲ್ಪಿಸಬೇಕಾದುದು ಅಗತ್ಯ.

ಚರ್ಮ ಹದಮಾಡುವ ಕೈಗಾರಿಕೆಯಂಥದರಲ್ಲಿ ಬೃಹತ್ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಇಂಥ ಕೈಗಾರಿಕೆಗಳೂ ಇವೆ. ಅಲ್ಲಿ ಅದನ್ನು ಉಪಯೋಗಿಸೋಣ. ಆದರೆ ಖಾಸಗಿ ಒಡೆತನದಲ್ಲಿ ಬೇಡ. ಕ್ರೋಮ್ ಚರ್ಮ ಬೇಕಾದರೆ ಸಹಕಾರ ಸಂಘಗಳ ಮೂಲಕ ಮಾಡಿ ಚಮ್ಮಾರರಿಗೆ ಚರ್ಮವನ್ನು ಮೂಲ ಕ್ರಯಕ್ಕೆ ಕೊಡೋಣ.

ಇದೇ ರೀತಿ ವೈಯಕ್ತಿಕವಾಗಿ ಅಥವಾ ಚಿಕ್ಕ ಪ್ರಮಾಣದಲ್ಲಿ ಮಾಡಬಹುದಾದವೂ ಎಷ್ಟೋ ಇವೆ. ಉದಾ : ೧೬೦೦ ಡಿಗ್ರಿ ಶಾಖದ ಭಟ್ಟಿಯನ್ನು ಬಂಡವಾಳ, ವಿದ್ಯುತ್ತು ಇಲ್ಲದೆ ಕಟ್ಟಲಾಗುವುದಿಲ್ಲ. ಅದು ಕೇಂದ್ರಿತ ವಿಧಾನ. ವಿದ್ಯುತ್ತನ್ನು ಬಳಸೋಣ, ಆದರೆ ಲಾಭಕ್ಕಾಗಿ ಅಲ್ಲ. ಸಮಾಜವನ್ನು ಶೋಷಣೆ ಮಾಡಲು ಇದೊಂದು ಸಾಧನವಾಗಬಾರದು.

೫ನೇ ಪುಟದಿಂದ.........ಭಾರತೀಯ ಪರಿಸರದಲ್ಲಿನ ಸೈದ್ಧಾಂತಿಕ ಒಲವುಗಳು

ಗಾಂಧೀವಾದಿಗಳು ಸಾಂಸ್ಕೃತಿಕ ಹಾಗೂ ಜೈವಿಕ ಅಭಿವೃದ್ಧಿಗಾಗಿ ನಾವು ತೆರುತ್ತಿರುವ ಬೆಲೆಯ ಅರಿವನ್ನು ಮೂಡಿಸಿಕೊಟ್ಟಿದಾರೆ. ಮಾರ್ಕ್ಸ್‌ವಾದಿಗಳು ಪಟ್ಟಣಗಳಲ್ಲಿ ಕಾರ್ಮಿಕ ಹಾಗೂ ಬಡ ಕೂಲಿಕಾರರ ನಡುವೆ ಕೆಲಸ ಮಾಡುತ್ತಾ ಅವರ ಜೀವನ ಮಟ್ಟ ಪರಿಸರ ವಿನಾಶದ ಜೊತೆಗೇ ಕುಸಿಯುತ್ತಿರುವುದನ್ನು ತೋರಿಸಿದ್ದಾರೆ.

ಪ್ರಚಾರ ಸಿಕ್ಕಿರುವ ಪರಿಸರ ಚಳುವಳಿಯ ಹಲವು ಗೆಲುವುಗಳೆಂದರೆ ಚಿಪ್ಕೋ ಬೇಡ್ತಿ ಮತ್ತು ಸೈಲೆಂಟ್‌ವ್ಯಾಲಿ, ಕೈಗಾ ಹಾಗೂ ಇತರ ಅಭಿವೃದ್ಧಿ ಕಾರ್ಯಕ್ರಮಗಳು. ಆದರೆ ಅಧಿಕಾರರೂಢರಲ್ಲಿ ಇನ್ನೂ ಪರಿಸರದ ಬಗ್ಗೆ ಹೆಚ್ಚಾಗಿ ಅರಿವು ಮೂಡಿಲ್ಲ.

ಸಮಾಜವಾದದಲ್ಲಿ ನಂಬಿಕೆ ಇರುವ ಎಲ್ಲರೂ ಸಮಾನತೆಯನ್ನು ಸಾಧಿಸಲು ಪರಿಸರದ ಪರಿಸ್ಥಿತಿ ಮುಖ್ಯವಾದದ್ದು ಎಂಬುದನ್ನು ಒಪ್ಪಬೇಕಾಗಿದೆ. ಆದ್ದರಿಂದ ಪರಿಸರದ ಸದೃಢತೆಯನ್ನು ಸಾಧಿಸಲು ಶ್ರಮಿಸಬೇಕಾಗಿದೆ.

ಅನುವಾದಕರು : ಶ್ರೀಮತಿ ಇಂದು ರಂಗರಾಜ್

'ಸಂವಾದ' ದ ಸಾಭಾರ

ಭವತಿ ಭಿಕ್ಷಾಂ ದೇಹಿ

— ಆನಂದ

॥ಭವತಿ ಭಿಕ್ಷಾಂ ದೇಹಿ!॥
॥ಭಿಕ್ಷಾನ್ನ, ತಾಯಿ!॥
"ಮುಂದೆ ಹೋಗಿಬಿಟ್ಟು ಬಾಪ್ಪ!"
"ಇವತ್ತು ಎಲ್ಲಿಯೂ ಸಿಕ್ಕಲಿಲ್ಲ, ತಾಯಿ!"

ಭಿಕ್ಷಾನ್ನಕ್ಕೆ ಬಂದಿದ್ದ ಹುಡುಗನ ಹೆಸರು ಮಾಧು. (ಸ್ಕೂಲಿನಲ್ಲಿ 'ಮಾಧವ ರಾವ್' ಎಂದು ಇರಬಹುದು) ಹೋಗಿಬಿಟ್ಟು ಬಾ, ಎಂದು ಹೇಳಿದವರು ನಾಗೇಶ ರಾಯರ ಹೆಂಡತಿ ಶಾರದಾಬಾಯಿ; ಇದುವರೆಗೆ ಅವರು ಮಾಧುವನ್ನು ಎಂದೂ ಭಿಕ್ಷಾನ್ನ ಹಾಕದೆ ಕಳುಹಿಸಿರಲಿಲ್ಲ; ಆದರೆ ಇಂದು ಊಟವಾಗಿ ಎಲ್ಲ ಮುಗಿದು ಹೋಗಿತ್ತು, ಅವನೂ ಇದುವರೆಗೆ ಎಂದೂ ಎರಡನೆಯ ಸಾರಿ ಕೇಳಿದ್ದಿಲ್ಲ; ಆದ್ದರಿಂದ ಅವನು ಇವತ್ತು ಸಂಕೋಚದಿಂದ "ಎಲ್ಲಿಯೂ ಸಿಕ್ಕಲಿಲ್ಲ" ವೆಂದು ಹೇಳಿದ ಕೂಡಲೆ ಅವರ ಗಮನವು ಆ ಕಡೆ ಹೋಯಿತು. ಅನಂತರ, "ಮಧ್ಯಾಹ್ನದ ಅನ್ನ ಸ್ವಲ್ಪ ಮಿಕ್ಕಿದೆಯೇನೋ ಹಾಕಲೇ ಅಪ್ಪ?" ಎಂದು ಕೇಳಿದರು.

"ಹಾಕಿ ಅಮ್ಮ"

"ಸ್ವಲ್ಪ ಮೆತ್ತಗಿದೆಯೆಂತ ಕಾಣುತ್ತದೆಯಲ್ಲ, ಇರಲೇ? ಹಳಸಿದ ಅನ್ನ ಹಾಕಿದ ರೆಂದುಕೊಳ್ಳಬೇಡ; ತಿನ್ನುವುದಕ್ಕೆ ಬರುವ ಹಾಗಿದ್ದರೆ ತಿನ್ನು; ಆಗದಿದ್ದರೆ ಬಿಸಾಟು ಬಿಡು."

"ಹಾಕಿ ಅಮ್ಮ; ಭಿಕ್ಷಾನ್ನದ ಹುಡುಗರು ಅದೆಲ್ಲಾ ನೋಡುವುದಕ್ಕಾಗು ತ್ತದೆಯೇ? ನನಗೆ ಎಲ್ಲಾ ಅಭ್ಯಾಸವಾಗಿದೆ; ಅದು ಉಪವಾಸಕ್ಕಿಂತ ಕಡೆಯೆ ತಾಯಿ!"

"ಉಪವಾಸ ಏಕಪ್ಪ!"

ಹೀಗೆಂದು ಹೇಳಿ ಶಾರದಮ್ಮನವರು ಮಿಕ್ಕಿದ್ದ ಮಧ್ಯಾಹ್ನದ ಅನ್ನವನ್ನೆಲ್ಲಾ ಹಾಕಿ ಕಳುಹಿಸಿದರು. ಈ ಮಾತುಗಳನ್ನು ಕೇಳಿ ಓಡಿಬಂದು ಅವರ ಮಗಳು—ಆರೇಳು

ವರ್ಷದ ಹುಡುಗಿ–ಸೀತೆ, ಹುಡುಗ ಹೊರಟುಹೋದ ಮೇಲೆ, "ಹಳಸಿದ ಅನ್ನ ಹ್ಯಾಗೆ ತಿಂತಾನೇ ಅಮ್ಮ! ಅಸಯ್ಯ ಆಗುವುದಿಲ್ಲವೇನೇ?" ಎಂದು ಕೇಳಿದಳು.

"ಹಳಸಿರಲಿಲ್ಲ ಕಣೆ! ಎಲ್ಲೋ ಸ್ವಲ್ಪ ಮೆತ್ತಗಿತ್ತು ಅಷ್ಟೆ" ಎಂದು ಶಾರದಮ್ಮನವರು ಉತ್ತರ ಕೊಟ್ಟರು. ಆದರೆ ಆ ಹುಡುಗನ ಮಾತುಗಳನ್ನೂ ಅವನ ದೈನ್ಯವನ್ನೂ ನೋಡಿ ಅವನ ಪೂರ್ವೋತ್ತರಗಳನ್ನೆಲ್ಲಾ ತಿಳಿದುಕೊಳ್ಳಬೇಕೆಂದು ಕುತೂಹಲ ಹುಟ್ಟಿತು; ನಾಗೇಶರಾಯರೂ ಆಗಬಹುದೆಂದೂ ಒಪ್ಪಿಕೊಂಡರು.

ಗಂಡಹೆಂಡಿರಿಬ್ಬರೂ ಹೀಗೆ ಒಂದೇ ವಿಧವಾದ ಮನಸ್ಸು ಕನಿಕರವೂ ಧಾರಾಳ ಬುದ್ಧಿಯೂ ಇರುವುದು ಅಪರೂಪ, ಸಾಮಾನ್ಯವಾಗಿ ವಿದ್ಯಾವಂತನಿಗೆ ಮೂಢೆಯೂ, ಸಾತ್ವಿಕನಿಗ ರಾಕ್ಷಸಿಯೂ, ಧಾರಾಳಿಗೆ ಜಿಪುಣೆಯೂ ಹೆಂಡತಿಯಾಗುವುದೇ ಹೆಚ್ಚು; ಹಾಗಲ್ಲದೆ ಅನುರೂಪಗಳಾದ ಹೆಂಡತಿ ಇದ್ದದ್ದರಿಂದ ನಾಗೇಶರಾಯರ ಸಂಸಾರವು ಅಮೃತಮಯವಾಗಿತ್ತು; ಅವರು ತಮ್ಮ ಸಂಸಾರವನ್ನು ಕ್ಷೀರಸಾಗರವೆಂದೂ ತಮ್ಮ ಹೆಂಡತಿಯು ಅದರಲ್ಲಿ ಹುಟ್ಟಿದ ಲಕ್ಷ್ಮಿಯೆಂದೂ ಇನ್ನೂ ಏನೇನೋ ಹೇಳಿಕೊಳ್ಳುವರು.

ಮರುದಿನ ಮಾಧು ಬಂದಾಗ ಅವನ ಕಥೆಯೆಲ್ಲಾ ತಿಳಿಯಿತು; ಬಹು ಕಷ್ಟವಾದ ಕಥೆ. ತಂದೆ ತಾಯಿಗಳು ತೀರಾ ಬಡವರು; ಎಲ್ಲೋ ದೂರದ ಹಳ್ಳಿಯಲ್ಲಿ ಇರುವರು; ಮಾಧುವು ಮಾತ್ರ ಪಟ್ಟಣಕ್ಕೆ ಬಂದು ಭಿಕ್ಷಾನ್ನದಿಂದ ಹೊಟ್ಟೆ ಹೊರೆದುಕೊಳ್ಳುತ್ತ ಎಂಟ್ರೆನ್ಸ್ ತರಗತಿಯಲ್ಲಿ ಓದುತ್ತಿದ್ದನು. ಒಪ್ಪತ್ತು ಉಪವಾಸ, ತಂಗಳು, ಹಳಸಲು, ಎಲ್ಲಾ ಅವನಿಗೆ ಚಿರಪರಿಚಿತವಾಗಿದ್ದುವು. ಈ ಪ್ರಪಂಚದಲ್ಲಿ ಎಷ್ಟೋ ಸಹಸ್ರಜನ ತನಗಿಂತಲೂ ಹೆಚ್ಚು ಕಷ್ಟಪಡುತ್ತಿರುವರೆಂದೂ, ನಿಲ್ಲುವುದಕ್ಕೆ ನೆಲೆಯಿಲ್ಲದ ನಿರ್ಗತಿಕರು ಎಷ್ಟೋ ಮಂದಿ ಇರುತ್ತಿರುವರೆಂದೂ, ತನ್ನನ್ನು ದೇವರು ಅವರಿಗಿಂತಲೂ ನೂರು ಪಾಲು ಉತ್ತಮ ಸ್ಥಿತಿಯಲ್ಲಿಟ್ಟಿರುವನೆಂದೂ ಹೇಳಿಕೊಳ್ಳುವನು. "ನಾನು ಜೋಳಿಗೆ ಹಾಕಿಕೊಂಡು ಹೋದರೆ 'ಭಿಕ್ಷಾನ್ನದ ಹುಡುಗ' ಎಂದು ಯಾರಾದರೂ ನಾಲ್ಕು ಜನ ಅನ್ನ ಹಾಕುತ್ತಾರೆ; ಬೀದಿಯಲ್ಲಿ ನರಳುತ್ತ ಬಿದ್ದಿರುವ ಕುಂಟರೂ, ಕುರುಡರೂ ಕುಷ್ಠರೋಗಿಗಳೂ ಇದ್ದಾರಲ್ಲ! ಇವರ ಗತಿಯೇನು?" ಎಂದು ಪದೇ ಪದೇ ಯೋಚನೆಯು ಬರುವುದು. ಆಗ ಹುಡುಗರು ಹೆದರಿಕೆಗೆ ಕಣ್ಣು ಮುಚ್ಚಿಕೊಂಡು ಬಿಡುವಂತೆ ಮುಂದೆ ಏನೂ ತೋರದೆ ಸೊರಗಿ ಸುಮ್ಮನಾಗುವನು.

ಅವನ ಕಥೆಯನ್ನು ಕೇಳಿ ನಾಗೇಶರಾಯರಿಗೂ ಶಾರದಮ್ಮನವರಿಗೂ ಬಹಳ ವ್ಯಸನವಾಯಿತು; ಅಲ್ಲಿಂದ ಮುಂದೆ ಆ ಮನೆಯಲ್ಲಿ ಅವನು ಹೋಗಿಬಿಟ್ಟು ಬರಬೇಕಾಗಲಿಲ್ಲ. ನಿತ್ಯವೂ ಅನ್ನದ ಜೊತೆಗೆ ಸ್ವಲ್ಪ ತುಪ್ಪವೂ, ಹಬ್ಬ ಹರಿದಿನಗಳಲ್ಲಿ

ತಿಂಡಿಗಳೂ ಸಿಕ್ಕುತ್ತ ಬಂದವು.

"ಅಮ್ಮ, ಆ ಹುಡುಗ ಯಾರೇ?" ಎಂದು ಸೀತೆಯು ಒಂದು ದಿನ ಕೇಳಿದಳು.

ಶಾರದಮ್ಮ–"ಭಿಕ್ಷಾನ್ನದ ಹುಡುಗ ಕಣೇ!"

ಸೀತೆ–"ಹೌದಮ್ಮ, ಭಿಕ್ಷಾನ್ನದ ಹುಡುಗ. ಅವನು ಯಾರು ಅಂತ ಕೇಳಿದೆ, ಅವನಿಗೆ ತಿಂಡೀ ಎಲ್ಲಾ ಕೊಡುತ್ತೀಯಲ್ಲಾ ಅದಕ್ಕೆ."

ಶಾರದಮ್ಮ – "ಯಾರಾದರೇನು? ನೀನೇನು ಮದುವೆ ಮಾಡಿಕೊಳ್ಳ ಬೇಕೇನು?"

ನಮ್ಮ ಹೆಂಗಸರಿಗೆ ಅಡಿಗೆ, ಒಡವೆ, ಮದುವೆ–ಇದರಲ್ಲಿ ಎಲ್ಲವೂ ಮುಗಿದು ಹೋಗುವುದು. ಈಗ ಸೀತೆಯ ಮಾತೂ ಇಲ್ಲಿಯೇ ನಿಂತು ಹೋಯಿತು. ಅಂತೂ ದಿನ ದಿನಕ್ಕೆ ಎಲ್ಲರಿಗೂ ಮಾಧುವಿನ ಮೇಲೆ ವಿಶ್ವಾಸವು ಹೆಚ್ಚಿತು. ಸೀತೆಯು ತಾನೇ ಒಂದೊಂದು ದಿನ ಅನ್ನವನ್ನು ಹಾಕುವಳು : ತಿಂಡಿ ಮಾಡಿದ ದಿನವಂತೂ ಅದನ್ನು ಮತ್ತಾರೂ ಹಾಕಲೇ ಕೂಡದು; ದಿನಕ್ಕೊಂದು ಸಾರಿಯಾದರೂ ಮನೆ ಯಲ್ಲಿ ಅವನ ಪ್ರಸ್ತಾಪ ಬರದೇ ಇರುತ್ತಿರಲಿಲ್ಲ. ಈ ಸಂದರ್ಭದಲ್ಲಿ ಮಾಧು ಇಷ್ಟ ಪಟ್ಟಿದ್ದರೆ ನಾಗೇಶರಾಯರಿಂದ ಬೇಕಾದ ಸಹಾಯವನ್ನೆಲ್ಲಾ ಪಡೆದು ಸುಖವಾಗಿರ ಬಹುದಾಗಿತ್ತು. ಆದರೆ ಅವನ ಪ್ರಕೃತಿಯು ಅಷ್ಟು ಸಡಿಲವಾಗಿರಲಿಲ್ಲ.

ಒಂದು ದಿನ ರಾತ್ರಿ ನಾಗೇಶರಾಯರು ಊಟಕ್ಕೆ ಕುಳಿತಿರಲು ಅವರಿಗೆ ಅನ್ನ ಬಡಿಸಿ ತುಪ್ಪ ಹಾಕುವಾಗ ಶಾರದಮ್ಮನವರಿಗೆ ಮಾಧುವಿನ ಜ್ಞಾಪಕ ಬಂತು : ಆಗ ಅವರು

"ಪಾಪ, ಮಾಧುಗೆ ಬಹಳ ಕಷ್ಟ!" ಎಂದರು.

"ಹೌದು; ಏನು ಮಾಡುವುದು? ನಾನೂ ನನ್ನ ಕೈಲಾದ ಸಹಾಯವನ್ನೆಲ್ಲಾ ಮಾಡುತ್ತಿದ್ದೇನೆ. ಯಾವುದೋ ಎರಡು–ಮೂರು ಪುಸ್ತಕಗಳು ಬೇಕಾಗಿದ್ದುವೆಂದು ತಿಳಿಯಿತು; ತೆಗಿಸಿಕೊಟ್ಟೆ; ಒಂದೆರಡು ಬಟ್ಟೆ ಕೊಡಿಸಿದೆ; ಬಹಳ ಕಷ್ಟವಾಗಿದ್ದರೆ ನಮ್ಮ ಮನೆಯಲ್ಲಿಯೇ ಬಂದಿರುವ ಹಾಗೆ ಹೇಳಿದೆ."

"ಅದಕ್ಕೆ ಅವನೇನಂದ?"

"ನನಗೆ ಈಗ ಅಷ್ಟೇನೂ ಕಷ್ಟವಿಲ್ಲ–ಎಂದ."

"ಅವನ ತಂದೆ ತಾಯಿಗಳು ತೀರ ಬಡವರಂತೆ."

"ಹೌದು, ಮೊನ್ನೆ ಅವರಿಗೆ ಕಳುಹಿಸುವ ಹಾಗೆ ಹೇಳಿ ಹತ್ತು ರೂಪಾಯಿ ಕೊಟ್ಟೆ."

"ಏನೋ ನಮ್ಮ ಕೈಲಾದಷ್ಟು ಮಾಡುವುದು. ದೇವರೇ ಅವನನ್ನು ಮುಂದಕ್ಕೆ ತರಬೇಕು."

ಪರೀಕ್ಷೆಯು ಹತ್ತಿರ ಬಂದುಬಿಟ್ಟಿತಲ್ಲಾ ಎಂದು ಕಳವಳ ಪಡುವ ಹುಡುಗರೇ ಹೆಚ್ಚು ಮಂದಿ; ಆದರೆ ಮಾಧುವು ಆ ಗುಂಪಿಗೆ ಸೇರಿದವನಾಗಿರಲಿಲ್ಲ. "ಪರೀಕ್ಷೆಯೂ ಇನ್ನೂ ಎರಡು ತಿಂಗಳಿದೆಯಲ್ಲಾ–ಎಂದಿಗೆ ಕಳಿಯುವುದೋ!" ಎಂದು ಯೋಚಿಸುತ್ತಿರುವನು; ಪರೀಕ್ಷೆ ಮುಗಿದ ಮೇಲೆ ಹೇಗಾದರೂ ತನ್ನ ಕಷ್ಟ ಸ್ವಲ್ಪ ತಪ್ಪೀತು ಎಂದು ಅವನ ಯೋಚನೆ.

ಹಾಗೂ ಹೀಗೂ ಒಂದು ತಿಂಗಳು ಕಳೆಯಿತು; ಆಗ ಅವನಿಗೆ ಮಲೇರಿಯಾ ಜ್ವರ ಬಂದು ಹಾಸಿಗೆ ಹಿಡಿದು ಮಲಗಿಬಿಟ್ಟನು. ದಿನ ಬಿಟ್ಟು ದಿನ ಜ್ವರ ಬರುವುದಕ್ಕೆ ಆರಂಭವಾಗಿ ದೇಹದಲ್ಲಿದ್ದ ಬಲವನ್ನೆಲ್ಲಾ ಹಿಂಡಿ ತೆಗೆದುಬಿಟ್ಟಿತು. ಏಳುವುದಕ್ಕೆ ತ್ರಾಣವಿಲ್ಲ. ಆ ಕಾಲದಲ್ಲಿ ಅವನ ಸ್ನೇಹಿತ ಕೃಷ್ಣಮೂರ್ತಿ ಎಂಬ ಹುಡುಗನು ನಿತ್ಯವೂ ತನ್ನ ಮನೆಯಿಂದ ಗಂಜಿ, ಹಾಲು, ಎಲ್ಲಾ ತಂದುಕೊಡುತ್ತಿದ್ದ. ಯಾರೋ ಪಂಡಿತರಿಗೆ ದಮ್ಮಯ್ಯ ಗುಡ್ಡೆಹಾಕಿ ಔಷಧಿಗೆ ಏರ್ಪಾಡು ಮಾಡಿದ. ಆದರೂ ಮಾಧುವಿಗೆ ಒಂದು ಕಡೆ ಜ್ವರದ ತಾಪ, ಒಂದು ಕಡೆ ಪರೀಕ್ಷೆಯ ಯೋಚನೆ; ಇವೆರಡೂ ಸೇರಿ ಅವನ ಮನಸ್ಸಿನಲ್ಲಿ ಶಾಂತಿಯಿಲ್ಲದ ಹಾಗೆ ಮಾಡಿದುವು. ಆದರೂ ಅವನು ತನ್ನ ಕಾಯಿಲೆಯ ಸಮಾಚಾರವನ್ನು ಯಾರಿಗೂ ತಿಳಿಸಲಿಲ್ಲ; ತಿಳಿಸುವುದಕ್ಕೆ ಆಗಲೂ ಇಲ್ಲ–ಯಾರೂ ಇರಲೂ ಇಲ್ಲ. ಇದ್ದ ಕೃಷ್ಣಮೂರ್ತಿಯೊಬ್ಬನು ನೆರವಾಗಿ ಬಂದ! ತಂದೆ ತಾಯಿಗಳು ಗಾಬರಿಪಟ್ಟಾರೆಂದು ಅವರಿಗೆ ಬರೆಯಲಿಲ್ಲ. ಆದರೆ ತಂದೆ ತಾಯಿಗಳಿಗಿಂತ ಹೆಚ್ಚಾಗಿ, ನಾಗೇಶರಾಯರಿಗೂ ಶಾರದಮ್ಮನವರಿಗೂ ಕಳವಳಕ್ಕೆ ಆರಂಭವಾಯಿತು. "ಪಾಪ, ಮಾಧು ಸ್ವಸ್ಥವಾಗಿದಾನೆಯೋ ಇಲ್ಲವೋಂದ್ರೆ! ಆಗಲೇ ಎಂಟು ಹತ್ತು ದಿನವಾಯಿತು ಭಿಕ್ಷಾನ್ನಕ್ಕೆ ಬಂದು; ಪರೀಕ್ಷೆ ಬೇರೆ ಹತ್ತಿರವಾಯಿತು" ಎಂದು ಶಾರದಮ್ಮನವರು ಗಂಡನ ಕೈಲಿ ಪ್ರಸ್ತಾಪವನ್ನೆತ್ತಿದರು.

ನಾಗೇಶರಾಯರು ಮಾಧುವನ್ನು ನೋಡಿಕೊಂಡು ಬರುವುದಕ್ಕೆ ಅವನಿದ್ದ ಕೊಠಡಿಗೆ ಹೋದರು. ಕೊಠಡಿಯ ಬಾಗಿಲು ಓರೆಯಾಗಿತ್ತು; ಒಳಗೆ ಮಾಧುವು ಹಾಸಿಗೆಯ ಮೇಲೆ ಮಲಗಿದ್ದ. ನಾಗೇಶರಾಯರು ಹೊರಗೇ ನಿಂತುಕೊಂಡು "ಮಾಧು!" ಎಂದು ಕೂಗಿದರು. ಮಾಧುವು ಮಲಗಿಕೊಂಡೇ "ಯಾರು!" ಎಂದು ಕೇಳಿದನು.

ರಾಯರು "ನಾನು" ಎಂದರು.

ಈಗ ಧ್ವನಿಯಿಂದ ನಾಗೇಶರಾಯರೆಂದು ತಿಳಿದುಕೊಂಡು, ಕಷ್ಟದಿಂದ ಎದ್ದು ಬಾಗಿಲು ತೆಗೆದನು. ಅವರು ಒಳಗೆ ಬಂದು,

"ಏನಯ್ಯ ಮಲಗಿಬಿಟ್ಟಿದ್ದೀಯ! ಏನು ಕಾಯಿಲೆ? ಹ್ಯಾಗಿದೆ ಈಗ? ನನಗೆ ಹೇಳಿಕಳುಹಿಸಬಾರದಿತ್ತೇ?" ಎಂದರು.

"ಚಳಿಜ್ವರ ಬರುತ್ತ ಇತ್ತು; ಈಗ ಸ್ವಲ್ಪ ಇಳಿದಿದೆ. ಬಹಳ ನಿಶ್ಯಕ್ತಿ."

"ನನಗೇಕೆ ಹೇಳಿಕಳುಹಿಸಲಿಲ್ಲ?"

"ಅಯ್ಯೋ, ಸುಮ್ಮನೆ ತೊಂದರೆ!"

"ಮತ್ತೆ, ಔಷಧಿ ಪಥ್ಯ?"

"ನನ್ನ ಸ್ನೇಹಿತ ಕೃಷ್ಣಮೂರ್ತಿ ಎಂತ ಇದಾನೆ; ಅವನು ಸ್ವಲ್ಪ ಗಂಜಿ ಹಾಲು ತಂದು ಕೊಡುತ್ತಾ ಇದಾನೆ."

"ಆಗಲಿ; ಗಾಳಿಗೆ ಮೈಬಿಟ್ಟುಕೊಂಡಿರಬೇಡ; ಹೊದ್ದುಕೊಂಡು ಮಲಗಿಕೊ, ಇಲ್ಲದಿದ್ದರೆ ನಮ್ಮ ಮನೆಗೇ ಬಂದುಬಿಡು, ಗಾಡಿ ತರುತ್ತೇನೆ."

"ಇಲ್ಲ. ಇಲ್ಲೇ ಇರುತ್ತೇನೆ; ಇವತ್ತು ಸ್ವಲ್ಪ ವಾಸಿ."

ನಾಗೇಶರಾಯರು ಅಲ್ಲಿಂದ ಮನೆಗೆ ಬಂದವರು ಡಾಕ್ಟರ್ ವೆಂಕಟರಾಯರಿಗೆ ಒಂದು ಚೀಟಿ ಬರೆದು ಕಳುಹಿಸಿದರು. ಅದನ್ನು ನೋಡಿ ಡಾಕ್ಟರು ಮಾಧುವಿನ ಕೊಠಡಿಗೆ ಹೋಗಿ ಅವನ ದೇಹ ಸ್ಥಿತಿಯನ್ನು ಪರೀಕ್ಷಿಸಿ ಔಷಧಿ ಕಳುಹಿಸಿಕೊಟ್ಟರು. ನಾಗೇಶರಾಯರ ಮನೆಯಿಂದ ಗಂಜಿ, ಬಿಸಿ ನೀರು, ಕಾಫಿ ಇವೂ ಬಂದವು. ನಿತ್ಯವೂ ರಾಯರೂ ಡಾಕ್ಟರೂ ಬಂದು ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು. "ಅಯ್ಯೋ, ಈ ಭಿಕಾರಿಗೆ ಇವರು ಇಷ್ಟು ಒದ್ದುಕೊಳ್ಳುತ್ತಾರಲ್ಲ!" ಎಂದು ಮಾಧು ವಿಗೆ ಬಹಳ ಸಂಕೋಚ; ಅಂತೂ ಸುಮಾರು ಒಂದು ವಾರದಲ್ಲಿ ರೋಗವು ಗುಣ ಮುಖವಾಯಿತು.

ಒಂದು ತಿಂಗಳು ಕಳೆಯಿತು; ಪರೀಕ್ಷೆ ಬಂತು; ಅದೂ ಕಳೆಯಿತು. ಪಾಸೂ ಆಯಿತು. ಅದನ್ನು ಕೇಳಿ ಅವನಿಗೆ ತಲೆಯ ಮೇಲಿನಿಂದ ಒಂದು ದೊಡ್ಡ ಬೆಟ್ಟ ವನ್ನು ಇಳಿಸಿದಂತಾಯಿತು. ಕೂಡಲೇ ಕೊಠಡಿಗೆ ಓಡಿಬಂದು ತಾನು ಪೂಜಿಸುತ್ತಿದ್ದ ಸರಸ್ವತೀ ಮಂಟಪದ ಮುಂದೆ ನಮಸ್ಕಾರ ಮಾಡಿ "ತಾಯಿ ನಿನ್ನ ಪ್ರಸಾದ!" ಎಂದನು.

ಮುಂದಿನ ತಿಂಗಳಿನ ಗೆಜೆಟ್ಟಿನಲ್ಲಿ ಅವನು ಸಂಸ್ಥಾನದಲ್ಲಿ ಎರಡನೆಯವನಾಗಿ ಪಾಸು ಮಾಡಿದ್ದಂತೆ ಪ್ರಕಟವಾಗಿತ್ತು. ಇದನ್ನು ನೋಡಿ ಅವನಿಗೆ ಆದ ಸಂತೋ ಷವು ವಿದ್ಯಾರ್ಥಿಗಳಾಗಿದ್ದವರಿಗೇ ಗೊತ್ತು. ತಾನು ಪಟ್ಟ ಶ್ರಮಕ್ಕೆ ತಕ್ಕ ಫಲ ದೊರೆಯಿತೆಂದು ಅವನಿಗೆ ಅಷ್ಟು ಸಂತೋಷವಿಲ್ಲ; ಮುಂದೆ ತನಗೆ ತಿಂಗಳಿಗೆ ಇಪ್ಪತ್ತು ರೂಪಾಯಿ ವಿದ್ಯಾರ್ಥಿವೇತನ ಬರುವುದು; ಅದರಲ್ಲಿ ಹತ್ತು ರೂಪಾಯ ನ್ನಾದರೂ ತಮ್ಮ ತಂದೆ ತಾಯಿಗಳಿಗೆ ಕಳುಹಿಸಬಹುದು—ಎಂದು. ವೇತನವು ಬಂತು. ಜೊತೆಗೆ ಎಲ್ಲಿಯೋ ಒಂದು ಕಡೆ ಪಾಠ ಹೇಳುತ್ತ ತಿಂಗಳಿಗೆ ಐದಾರು ರೂಪಾಯಿ

ಸಂಪಾದಿಸಿ ಅದನ್ನು ಪುಸ್ತಕ ಮುಂತಾದ ಹೆಚ್ಚು ಖರ್ಚುಗಳಿಗೆ ಉಪಯೋಗಿಸುವನು. ಭಿಕ್ಷಾನ್ನವು ತಪ್ಪಿತು.

ಆದರೆ ನಾಗೇಶರಾಯರ ಮನೆಗೆ ಮಾತ್ರ ಹೋಗಿಬರುತ್ತಿದ್ದನು. ಹಬ್ಬ ಹರಿ ದಿನಗಳಲ್ಲಿ ಊಟಕ್ಕೆ ಅಥವಾ ತಿಂಡಿಗೆ ಹೋಗುವುದು ಪೂರ್ವದಂತೆ ನಡೆದುಕೊಂಡು ಬರುತ್ತಿತ್ತು. ಹಿಂದೆ ಇದ್ದ ಕಷ್ಟವು ಈಗ ಇಲ್ಲ. ಆದ್ದರಿಂದ ಮತ್ತೆ ಮೂರು ವರ್ಷಗಳು ಅನಾಯಾಸವಾಗಿ ಕಳೆದು ಹೋದವು. ಬಿ. ಎ. ಪರೀಕ್ಷೆಯೂ ಆಯಿತು. ಅದರಲ್ಲಿ ಮಾಧು ಮೊದಲನೆಯ ತರಗತಿಯಲ್ಲಿ ತೇರ್ಗಡೆ ಹೊಂದಿ ಒಂದು ಬಂಗಾರದ ಪದಕವನ್ನು ಸಂಪಾದಿಸಿದನು. ಅದನ್ನು ಮೊದಲು ನಾಗೇಶರಾಯರಿಗೂ ಶಾರದಮ್ಮನವರಿಗೂ ತೋರಿಸಬೇಕೆಂಬ ಆತುರ; ಅದನ್ನು ಶಾರದಮ್ಮನವರು ಕೈಲಿ ಹಿಡಿದು ಕೊಂಡು ತೂಗುತ್ತಾ "ಚೆನ್ನಾಗಿದೆ! ಏನು ಎರಡು ಸವರನ್ ಇರಬಹುದು?" ಎಂದು ಹೇಳಿ ಹಿಂತಿರುಗಿಕೊಟ್ಟು, "ಎಲ್ಲಿಯಾದರೂ ಚೆನ್ನಾಗಿರಪ್ಪ, ನಮ್ಮ ಕಣ್ಣು ಮುಂದಿನ ಹುಡುಗ. ಎಷ್ಟೋ ಕಷ್ಟಪಟ್ಟಿದ್ದೀಯ" ಎಂದು ಹರಸಿದರು. ಮನಸ್ಸಿನಲ್ಲಿ "ಅವನ ತಾಯಿ ತಂದೆಗಳ ಪುಣ್ಯವೇ ಪುಣ್ಯ" ಎಂದುಕೊಂಡರು. ಮಾಧುವಿಗೆ ಅವರ ಅಂತಃಕರಣವನ್ನು ನೋಡಿ ಕಣ್ಣು ತುಂಬ ನೀರು ತುಂಬಿತು. "ನಿಮ್ಮ ಆಶೀರ್ವಾದ ಅಮ್ಮ!" ಎಂದು ನಮಸ್ಕಾರ ಮಾಡಿದನು.

ಸೀತೆಯು ತಾಯಿಯ ಬಳಿಯೇ ಅವರ ಸೆರಗನ್ನು ಹಿಡಿದುಕೊಂಡು ನಿಂತು ನೋಡುತ್ತಿದ್ದಳು. ತಾಯಿಯು ಪದಕವನ್ನು ಹಿಂತಿರುಗಿಕೊಟ್ಟಮೇಲೆ, "ಎಲ್ಲಿ ಮಾಧು, ನೋಡೋಣ" ಎಂದು ತಾನು ಅದನ್ನು ತೆಗೆದುಕೊಂಡು ಅಂಗೈಯಲ್ಲಿಟ್ಟು ಕೊಂಡು ನೋಡಿದಳು. ಥಳಥಳನೆ ಹೊಳೆಯುತ್ತಿತ್ತು. ಅದನ್ನು ನೋಡಿ ಅವಳ ಮುಖವು ಅರಳಿತು. ಮಾಧುವು ನೋಡಿ, "ಏನು ಸೀತಾ! ನಿನಗೆ ಬೇಕೇನು ಅದು? ನೀನೂ ಬಿ. ಎ. ಪಾಸು ಮಾಡು, ನಿನಗೂ ಸಿಗುತ್ತೆ; ಇಲ್ಲದಿದ್ದರೆ ನಾಳೆ ನಿನ್ನ ಗಂಡ ಬರುತ್ತಾನಲ್ಲ, ಅವನು ತಂದು ಕೊಡುತ್ತಾನೆ" ಎಂದನು.

ಮಾಧೂಗೆ ಈಗ ದೊಡ್ಡ ಕೆಲಸ; ದೊಡ್ಡ ಸಂಬಳ; ದೊಡ್ಡ ಮನೆ; ಮನೆ ಯಲ್ಲಿ ಕೈಗೊಬ್ಬರು ಆಳುಗಳು. ತಾಯಿ ತಂದೆಗಳ ಯೋಗಕ್ಷೇಮವನ್ನು ನೋಡಿ ಕೊಳ್ಳುವುದಕ್ಕಾಗಿಯೇ ಒಬ್ಬ ಅಡಿಗೆ ಪರಿಚಾರಕನೂ ಆಳೂ ಇದ್ದರು. ಅವರು ಹಳ್ಳಿಗೆ ಹೋಗಬೇಕೆಂದರೆ ಅನುಕೂಲವಾಗುವಂತೆ ಒಂದು ಗಾಡಿಯನ್ನೂ ಒಂದು ಜೊತೆ ಎತ್ತನ್ನೂ ಕೊಂಡುಕೊಂಡಿದ್ದನು. ಯಾವ ವಿಷಯದಲ್ಲಿಯೂ ಅವರಿಗೆ ವ್ಯಥೆ ಯಾಗಬಾರದೆಂಬುದೇ ಅವನ ಆಸೆ. ಅದಕ್ಕಾಗಿ ಅವನು ಎಷ್ಟೆಷ್ಟೋ ತೊಂದರೆ ಪಟ್ಟುಕೊಳ್ಳುತ್ತಿದ್ದನು. ಆದರೆ ಅವನು ಒಂದು ಸಾರಿ ಪ್ರೇಮಪೂರಕವಾಗಿ "ಮಾಧೂ" ಎಂದು ಕರೆದರೆ ಪಟ್ಟ ಶ್ರಮಕ್ಕೆಲ್ಲ ಫಲ ಬಂದಂತಾಗುತ್ತಿತ್ತು.

ಒಂದು ದಿನ ತನಗೆ ಕೆಲಸವಾದ ಮೇಲೆ ಮಾಧುವು ನಾಗೇಶರಾಯರ ಮನೆಗೆ ಹೋದನು. ಆಗ ಮಧ್ಯಾಹ್ನ; ನಾಗೇಶರಾಯರೂ ಶಾರದಬಾಯಿಯೂ ಮಾತಾಡುತ್ತ ಕುಳಿತಿದ್ದರು. ಮಾಧು ಇಬ್ಬರಿಗೂ ನಮಸ್ಕಾರ ಮಾಡಿದನು. ಅವರು ಅವನನ್ನು ಹರಸಿ ಕೆಲಸವಾದದ್ದನ್ನು ಕೇಳಿ ಸಂತೋಷಪಟ್ಟರು. ಶಾರದಾಬಾಯಿಯು ''ಏನಪ್ಪ ಮಾಧೂ! ಈಗ ನೀನು ದೊಡ್ಡವನಾದೆ; ದೊಡ್ಡ ಕೆಲಸಕ್ಕೆ ಬಂದೆ; ಕೈತುಂಬ ಸಂಬಳ ತರುತ್ತಿದ್ದೀಯೆ; ಇನ್ನು ಮೇಲೆ ನಿನ್ನನ್ನು ಮಾಧವರಾಯರೇ ಎಂದು ಕರೆಯಬೇಕು. ಅಂತ ಕಾಣುತ್ತದೆ'' ಎಂದರು.

"ನಾನು ದೊಡ್ಡವನಾದರೂ ನಿಮಗೆ ಚಿಕ್ಕವನೇ, ಮಾಧುವೇ; ನೀವು ಸಾಕಿ ಸಲುಹಿದ ಹುಡುಗ 'ರಾಯರು' ಹೇಗಾದಾನು?''

"ನಾವು ಸಾಕಿ ಸಲುಹಿದ್ದು ಅಷ್ಟರಲ್ಲೇ ಇರಲಿ; ಆದರೆ ನೀನು ಮದುವೆಯಾಗಿ ನಿನಗೆ ಒಬ್ಬ ಹುಡುಗನಾಗುವವರೆಗೂ ನೀನು ಹುಡುಗನೇ; ನಿನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗ ಬಂದು ಆಕ್ಷೇಪಣೆ ಮಾಡಿದರೆ ಆ ಮೇಲೆ ಬೇಕಾದರೆ ಬಹುವಚನ ದಲ್ಲಿ ಕರೆಯೋಣವಂತೆ!"

ಮಾಧೂಗೆ ಈ ಮಾತನ್ನು ಕೇಳಿ ಏನೋ ಸಂಕೋಚವಾಗಿ ಸ್ವಲ್ಪ ತಲೆ ಬಗ್ಗಿಸಿಕೊಂಡನು. ಸ್ವಲ್ಪ ಹೊತ್ತು ಎಲ್ಲರೂ ಸುಮ್ಮನೆ ಇದ್ದ ಮೇಲೆ, ಮಾಧು ತಟ್ಟನೆ "ಸೀತೆಯಲ್ಲಿ? ಕಾಣಿಸಲಿಲ್ಲ!" ಎಂದನು. ಶಾರದಬಾಯಿಯು "ಎಲ್ಲೋ ಒಳಗಿರಬಹುದು!" ಎಂದು, "ಸೀತಾ ಸೀತಾ", ಎಂದು ಕೂಗಿದರು. ಕೂಡಲೆ ಒಳಗೆ "ಧಢ ಧಢ!" ಎಂದು ಸದ್ದಾಯಿತು, ಕೈ ಬಳೆಗಳ ಶಬ್ದ, ಕಾಲುರುಳಿಯ ಶಬ್ದ. ಸೀತೆಯು ಓಡಿಬರುತ್ತಿದ್ದಳು. ಬಂದು ಬಾಗಿಲಲ್ಲಿ ತಟ್ಟನೆ ನಿಂತು ಬಿಟ್ಟಳು, ಆದರೆ ಬಾಗಿಲ ಹತ್ತಿರಕ್ಕೆ ಬಂದ ಕೂಡಲೆ. ಸರಿಗೆ ರುಮಾಲು ಹಾಕಿಕೊಂಡಿದ್ದ ದೊಡ್ಡ ಮನುಷ್ಯರೊಬ್ಬರು ಬೇರೆ ಇದ್ದರು, ಆದ್ದರಿಂದ ತಟ್ಟನೆ ಬಾಗಿಲಲ್ಲೆ ನಿಂತಳು. ಸೀತೆ ಅಲ್ಲೇ ನಿಂತಿದ್ದನ್ನು ನೋಡಿ, ಮಾಧು ಅವಳ ಕಡೆ ತಿರುಗಿ ನಗುತ್ತಾ 'ಸೀತಾ!' ಎಂದು ಕರೆದನು.

ಸೀತೆ ಮಾತನಾಡಲಿಲ್ಲ.

ಶಾರದಾಬಾಯಿ "ಮಾತಾಡೇ ಸೀತಾ!" ಎಂದರು,

ಸೀತೆ ಇನ್ನೂ ಹಿಂದಕ್ಕೆ ಸರಿದಳು, ಮಾತನಾಡಲಿಲ್ಲ.

ಮಾಧು ಪುನಃ "ಸೀತಾ!" ಎಂದು ಕೂಗಿದನು. ಉತ್ತರವಿಲ್ಲ.

ಮಾಧು– "ಯಾಕೆ ಸೀತಾ, ಮಾತೇ ಇಲ್ಲ? ನಾಚಿಕೆ ಬಂದು ಬಿಟ್ಟಿತೇನು ಆಗಲೇ? ಹೋಗಲಿ, ಅಲ್ಲಿಂದಲೇ ಮಾತನಾಡು". ಮಾತಿಲ್ಲ.

"ಹೋಗಲಿ ಬಿಡಮ್ಮ! ನಿನಗೆ ಜಂಭ ಬಂದಿದೆ. ಬಡವರನ್ನು ಕಂಡರೆ ನಿನಗೆ ಉದಾಸೀನ! ಯಾರಾದರೂ ಐಶ್ವರ್ಯವಂತ ಗಂಡನನ್ನು ಗೊತ್ತು ಮಾಡಿಕೊಂಡು ಬಂದಿದ್ದಾರೊ?".

ಅದಕ್ಕೂ ಮಾತಿಲ್ಲ! ಮಾತಿಗೆ ಬದಲಾಗಿ ಸೀತೆ ಪುನಃ ಒಳಕ್ಕೆ ಹೊರಟು ಹೋದಳು. ಮಾಧು ಇನ್ನೊಂದು ಘಳಿಗೆ ಮಾತ್ರ ಅಲ್ಲಿಯೇ ಮಾತನಾಡುತ್ತಿದ್ದ. ಅವರ ಮನೆಯಲ್ಲಿಯೇ ಕಾಫಿ ತಿಂಡಿ ಎಲ್ಲಾ ಆಯಿತು.

ಮಾಧು ಹೊರಟುಹೋದ ಮೇಲೆ ಗಂಡ ಹೆಂಡಂದಿರು ಏನೇನೋ ಮಾತನಾಡುತ್ತಿದ್ದರು. ಮಾಧುವಿನ ಮಾತೇ ಹೆಚ್ಚು: ಒಬ್ಬರು 'ಎಂಥ ಬುದ್ಧಿವಂತ!' ಎಂದರು; ಮತ್ತೊಬ್ಬರು 'ಅಷ್ಟು ದೊಡ್ಡ ಸಂಬಳ ತಂದರೂ ಒಂದು ಚೂರೂ ಜಂಭವಿಲ್ಲ' ಎಂದರು. ಅಷ್ಟು ಹೊತ್ತಿಗೆ ಗಡಿಯಾರದಲ್ಲಿ "ಡಿಂಗ್ ಡಿಂಗ್" ಎಂದು ಘಂಟೆ ಹೊಡೆಯಿತು. ಕೂಡಲೆ ಶಾರದಮ್ಮನವರು ಗಂಡನನ್ನು ಕುರಿತು ಥಟ್ಟನೆ, "ಈಗ ಮನಸ್ಸಿನಲ್ಲೇನಿತ್ತು ಬಲ್ಲಿರಾ?" ಎಂದು ಆಶ್ಚರ್ಯದಿಂದ ಕೇಳಿದರು.

"ಹೆಂಗಸರಿಗಿನ್ನೇನು ಯೋಚನೆ? ಮಾಧೂ ಮದುವೆ ಯಾವಾಗ ಎಂತ ಯೋಚಿಸಿರಬಹುದು."

"ಹೌದು ಅಂದ್ರೆ! ನಿಜವಾಗಿಯೂ ಅದೇ ಅದೇ; ನಿಮಗೆ ಹ್ಯಾಗೆ ಗೊತ್ತಾಯಿತು? ನಿಜವಾಗಿಯೂ ಮಾಧೂಗೆ ನಮ್ಮ ಸೀತೂನ ಕೊಟ್ಟುಯಾಕೆ ಮದುವೆ ಮಾಡಿಬಿಡಬಾರದು ಎಂದು ಯೋಚನೆ ಮಾಡುತ್ತಿದ್ದೆ: ಅಷ್ಟುಹೊತ್ತಿಗೆ ಸರಿಯಾಗಿ ಗಂಟೆ ಹೊಡೆಯಿತು."

ನಾಗೇಶರಾಯರು ನಕ್ಕುಬಿಟ್ಟರು.

"ಇನ್ನೇನು ಮದುವೆಯಾದ ಹಾಗೇ ಹಾಗಾದರೆ?"

"ಹಾಸ್ಯ ಮಾಡಬೇಡಿಂದ್ರೆ; ವಿಚಾರಿಸಿ."

ಕೂಡಲೇ ಇಬ್ಬರೂ ಎದ್ದರು. ತಾಯಿಯ ಮನಸ್ಸಿನ ತುಂಬ ಮಗಳ ಮದುವೆಯ ಯೋಚನೆಯೇ. ಆಕೆಯು ಒಳಕ್ಕೆ ಹೋಗಲು ಸೀತೆಯು ತಾಯಿಯನ್ನು ನೋಡಿ "ಅಮ್ಮಾ ಬಾರೆ, ಕವಡೆ ಆಡೋಣ'' ಎಂದಳು. ಅದಕ್ಕೆ ಆಕೆ "ಹೂಕಣೇ! ನನಗೆ ಬೇರೆ ಕೆಲಸವೇ ಇಲ್ಲ! ನಾಳೇ ಬರ್‍ತಾನಲ್ಲಾ ನಿನ್ನ ಗಂಡ ಅವನ ಕೈಲಿ ಬೇಕಾದರೆ ಆಡು" ಎಂದರು. ಅಷ್ಟಕ್ಕೆ ಸುಮ್ಮನಾಗಬೇಕೊ ಇಲ್ಲವೊ? ತುಂಟ ಹುಡುಗಿ! "ಆಡೇ ಅಡ್ತೀನಿ ಬಿಡ್ತೀನೇನು?" ಎಂದು ಬಿಟ್ಟಳು. ತಾಯಿಗೆ ಆಶ್ಚರ್ಯವಾಯಿತು. "ಅಲ್ಲ ಕಣೇ, ಇಷ್ಟು ಮಾತಾಡುವವಳಿಗೆ ಪಾಪ ಮಾಧು 'ಸೀತಾ ಸೀತಾ' ಎಂದು ಕೂಗಿದಾಗ ಎಲ್ಲಿ ಹೋಗಿತ್ತೆ ಬಾಯಿ? ಅಷ್ಟು ಕೂಗಿದರೂ ಮಾತೇ

ಆಡಬಾರದೇ?'' ಎಂದು. ಸೀತೆಯು "ಹೋಗೇ!" ಎಂದು ಬಿಟ್ಟಳು. ಮುಖವು ಕೆಂಪೇರಿತು. ಮಾತು ಮರೆಸುವುದಕ್ಕಾಗಿ "ಅಮ್ಮಾ ಈ ಕವಡೆ ಚೆನ್ನಾಗಿಲ್ಲ; ಬೇರೆ ಇದ್ದರೆ ಕೊಡೇ" ಎಂದಳು. ಆಕೆಯು "ಇರಲಿ, ನಾಳೆ ನಿನ್ನ ಮಾಧೂಗೇ ಕೊಟ್ಟು ಮದುವೆ ಮಾಡುವುದು! ಆಗಲೇ, ಮಾತಾಡ್ತಿಯೋ ಬಿಡ್ತೀಯೋ?" ಎಂದು ಹಾಸ್ಯ ಮಾಡಿದರು. ಸೀತೆ – "ನೀನು ಅಪ್ಪನ್ನ ಮದುವೆ ಮಾಡಿಕೊಂಡಾಗ ಏನು ಮಾಡಿದ್ದೆ? ಅವನ ಕೂಡ ಮಾತಾಡಿದ್ದೆಯೋ ಬಿಟ್ಟಿದ್ದೆಯೋ?"

ತಾಯಿಯು ಮಗಳ ಮಾತಿಗೆ ಬೆರಗಾಗಿ ಹೋಗಿ "ಅಬ್ಬಬ್ಬ! ಗಂಡುಬೀರಿ! ನಿನಗ್ಯಾರೆ ಇದನ್ನೆಲ್ಲಾ ಹೇಳಿಕೊಟ್ಟವರು?" ಎಂದು ಹೇಳಿ ನಕ್ಕುಬಿಟ್ಟರು.

ಇಷ್ಟೆಲ್ಲಾ ಆದದ್ದು ಮದುವೆಯಾಗದೆ ಇರುತ್ತದೆಯೇ? ಮದುವೆಯೂ ಆಯಿತು. ಮದುವೆಯ ವರ್ಣನೆಯು ಅನಾವಶ್ಯಕ; ಏಕೆಂದರೆ ಮದುವೆಯನ್ನು ನೋಡದವರಾರು? ಆದರೆ ಮಾಧುವಿನ ಮನೆಯಲ್ಲಿ ಒಂದು ವಿಶೇಷ ಸಂಗತಿ ಮಾತ್ರ ನಡೆಯಿತು; ಅದನ್ನು ಇಲ್ಲಿ ತಿಳಿಸಬೇಕು. ಅವನು ಹುಡುಗಿಗೆ ಸೀರೆ ಕುಪ್ಪಸ ಒಡವೆ ವಸ್ತು ಇವೆಲ್ಲಾ ತಕ್ಕಮಟ್ಟಿಗೆ ಮಾಡಿಸಿಕೊಟ್ಟಿದ್ದನು. ಅವುಗಳಲ್ಲಿ ತಾನು ಬಹುಮಾನವಾಗಿ ಪಡೆದ ಪದಕವು ಮುಖ್ಯವಾದದ್ದು. ಅದಕ್ಕೆ ಅವನು ಒಂದು ಸರವನ್ನು ಮಾಡಿಹಾಕಿದ್ದನು. ಉರುಟಣೆಯ ರಾತ್ರಿ ತಾನೂ ಸೀತೆಯೂ ಉಯ್ಯಾಲೆಯ ಚೆಂಡಾಡುತ್ತ ಇದ್ದಾಗ ಅವನು ಆ ಪದಕವನ್ನು ಅವಳ ಕೊರಳಿಗೆ ಹಾಕಿಬಿಟ್ಟನು. ಅಲ್ಲಿದ್ದ ಹೆಂಗಸರ ಗುಂಪಿಗೆ ಗುಂಪೇ ನಕ್ಕುಬಿಟ್ಟಿತು. ಅವಳು ಮೊದಲೇ ತಲೆಯನ್ನು ಬಗ್ಗಿಸಿಕೊಂಡು ಕುಳಿತಿದ್ದಳು. ಅದು ನಾಚಿಕೆಯಿಂದ ಇನ್ನೂ ಬಾಗಿತು. ಅವಳು ನಗುತ್ತ ಆ ಪದಕವನ್ನು ಕೈಯಲ್ಲಿ ಹಿಡಿದು ನೋಡಿದಳು. ಅಲ್ಲಿದ್ದವರಲ್ಲಿ ಒಬ್ಬರು ''ಏನೇ ದಾನಾ ಕೊಟ್ಟ ಎಮ್ಮೆನ ಹಲ್ಲು ಹಿಡಿದು ನೋಡ್ತೀಯಾ?" ಎಂದು ಕೇಳಿದರು. ಅವನು ಸುಮ್ಮನೆ ಪದಕವನ್ನು ಕೈಯಲ್ಲಿ ಹಿಡಿದುಕೊಂಡಿದ್ದಳು; ಒಂದು ಕಡೆ ಇಂಗ್ಲೀಷಿನಲ್ಲಿ ಏನೇನೋ ಬರೆದಿತ್ತು; ಮತ್ತೊಂದು ಕಡೆ ''ಶ್ರೀ ಸೀತಾದೇವಿ" ಎಂದು ಬರೆದಿತ್ತು. ಮಾಧು ಸ್ವಲ್ಪ ದಿನದ ಕೆಳಗೆ "ನಿನ್ನ ಗಂಡ ಪದಕವನ್ನು ತಂದು ಕೊಡುತ್ತಾನೆ" ಎಂದು ಹೇಳಿದ ಮಾತು ಈಗ ಅವಳಿಗೆ ಜ್ಞಾಪಕಕ್ಕೆ ಬಂದಿತೆಂದು ತೋರುತ್ತದೆ.

ಇದೆಲ್ಲಾ ಆಗಿ ಈಗ ಐದಾರು ವರ್ಷಗಳಾಗಿ ಹೋಗಿವೆ. ಈಗ ಸೀತೆಯು ಗಂಡನ ಮನೆಯಲ್ಲಿ ಸಂಸಾರ ಮಾಡಿಕೊಂಡಿದ್ದಾಳೆ. ಮನೆಯಲ್ಲಿ ಅಡಿಗೆಯವನಿಲ್ಲ; ಅವಳಿಗೆ ಅಡಿಗೆ ಮಾಡಿ ಬಡಿಸುವುದರಲ್ಲಿ ಬಹಳ ಆದರ; ಮಾಧುವಿಗೂ ಅವನ ತಾಯಿ ತಂದೆಗಳಿಗೂ ಅಡಿಗೆ ಮಾಡಿ ಬಡಿಸಿದರೆ ತೃಪ್ತಿ. ಅವರು ಅವಳಿಗೆ ತಾಯಿತಂದೆಗಳಿಗಿಂತಲೂ ಹೆಚ್ಚಾಗಿದ್ದರು. ಹೀಗೆ ಅವಳ ಸುಖಕ್ಕೆ ಯಾವ ಅಂಶದಲ್ಲಿಯೂ ಕುಂದು

ಇರಲಿಲ್ಲ; ಗಂಡನು ಅವಳಲ್ಲಿ ಪೂರ್ಣ ಪ್ರೇಮವನ್ನಿಟ್ಟಿದ್ದನು; ಆ ಪ್ರೇಮ ವೃಕ್ಷವು ಒಂದು ಫಲವನ್ನೂ ಬಿಟ್ಟಿತು. ಅದರ ಹೆಸರು "ಕೃಷ್ಣಮೂರ್ತಿ" (ಉರುಫ್‌– ಮೂರ್ತಿ, ರಾಜ, ದೊರೆ ಇತ್ಯಾದಿ).

ಮಾಧುವಿನ – ಮಾಧವರಾಯನ – ಮನೆಯಲ್ಲಿ ಈಗ ಮೂರು ನಾಲ್ಕು ಜನ ವಿದ್ಯಾರ್ಥಿಗಳು ಊಟ ಮಾಡಿಕೊಂಡಿದ್ದರು. ಅವರು ತಮ್ಮ ಮನೆಯಲ್ಲಿ ಊಟ ಮಾಡಿಕೊಂಡಿದ್ದಾರೆಂದು ಅವರಿಗೆ ಯಾವ ಕೆಲಸವನ್ನೂ – ಸೀತಮ್ಮನಾಗಲಿ ಮಾಧವ ರಾಯರಾಗಲಿ – ಹೇಳುತ್ತಿರಲಿಲ್ಲ. ಅವರಿವರ ಮನೆಯಲ್ಲಿ ಊಟ ಮಾಡಿಕೊಂಡಿರುವ ಕೆಲವು ಹುಡುಗರನ್ನು ನಾನು ನೋಡಿದ್ದೇನೆ; ಹೊರಗಿನವರಿಗೆ ಇವರು ಎಷ್ಟೋ ಸುಖವಾಗಿದ್ದಾರೆಂದೂ ಭಿಕ್ಷಾನ್ನ ವಾರಗಳ ಪರದಾಟ ಅವರಿಗಿಲ್ಲವೆಂದೂ ಭಾವನೆ; ಮನೆಯ ಯಜಮಾನರು ತಿಳಿದುಕೊಂಡಿರುವುದೂ ಹಾಗೆಯೇ; ಆದರೆ ನೂರಕ್ಕೆ ತೊಂಬತ್ತೊಂಬತ್ತು ಕಡೆ ಹುಡುಗರ ಅನುಭವ ಹಿಗಿರುವುದಿಲ್ಲ. ಏಕೆಂದರೆ ಮುಂದೆ ತಮ್ಮ ಮಗಳನ್ನೋ ನಾದಿನಿಯನ್ನೊ ಭಾವಮೈದುನನ ಮಗಳನ್ನೊ ಕೊಟ್ಟು ಮದುವೆ ಮಾಡುವ ಅಭಿಸಂಧಿಯಿಟ್ಟುಕೊಂಡು ಅನ್ನದಾನ ಮಾಡುವ ಪುಣ್ಯವಂತರೇ ಹೆಚ್ಚು ಮಂದಿ; ಇಲ್ಲದಿದ್ದರೆ ಆ ಹುಡುಗರಿಗೆ ನಿತ್ಯ ಮಾರ್ಕೆಟ್ಟಿಗೆ ಹೋಗಿಬರುವ ಕೆಲಸವೋ ಪಂಚೆ ಒಗೆದುಹಾಕುವ ಕೆಲಸವೊ ಇರುತ್ತದೆ. ನನ್ನ ಸ್ನೇಹಿತನೊಬ್ಬನಿಗೆ ಹೀಗೆ ಕಾಗದ ಬರೆಯುವ ಕೆಲಸವಿತ್ತು; ಮನೆಯ ಯಜಮಾನ ಕೈ ನಡುಗುವುದೆಂದು ನೆವ; ಅವರು ಕಾಗದ ಬರೆಸವುದಕ್ಕೆ ಕೂತರೆ ಮಧ್ಯೆ ನಾಲ್ಕು ಸಲ ಎದ್ದು ಹೋಗಿ ಹತ್ತು ಸಲ ಮಾತನಾಡಿ ಹೇಳಿ ಓದಿದ್ದನ್ನೇ ಓದಿಸಿ ಕೊನೆಗೆ ಮೂರು ಗಂಟೆಯ ಹೊತ್ತಿಗೆ ಹಾಗೂ ಹೀಗೂ ಮಾಡಿ ಕಾಗದವನ್ನು ಬರೆಸಿ ಮುಗಿಸುವರು. ಹೀಗೆ ವಾರಕ್ಕೆ ಎರಡು ಮೂರು ಕಾಗದಗಳಿದ್ದೇ ಇರುವುವು. ಇದರಂತೆ "ಸ್ವಲ್ಪ" ಸೌದೆ ಒಡೆದು ಹಾಕಿಬಿಡುವುದು, ಮಗುವನ್ನು ಎತ್ತಿಕೊಳ್ಳುವುದು ಇಂಥ ಪ್ರಕರಣಗಳೂ ಉಂಟು.

ಮಾಧವರಾಯನ ಮನೆಯಲ್ಲಿದ್ದ ಹುಡುಗರಿಗೆ ಇಂಥ ಕೆಲಸವೊಂದೂ ಇರು ತ್ತಿರಲಿಲ್ಲ; ಅವರಿಗೆ ಯಾವ ಕೆಲಸವನ್ನೂ ಹೇಳಕೂಡದೆಂದು ಖಂಡಿತವಾಗಿ ಅಪ್ಪಣೆ ಮಾಡಿದ್ದನು. ಭಿಕ್ಷಾನ್ನದವರು ಯಾರು ಬಂದರೂ ಹೋಗೆನ್ನುತ್ತಿರಲಿಲ್ಲ; ಇವುಗಳ ಜೊತೆಗೆ ತಿಂಗಳಿಗೆ ಸುಮಾರು ಐವತ್ತು ರೂಪಾಯಿಗಳವರೆಗೂ ಅವರಿಗೆ ನಗದಾಗಿ ಸಹಾಯ ಮಾಡುತ್ತಿದ್ದನು. ಯಾರೋ ಬೀದಿಯಲ್ಲಿ ಹೋಗುವವರಿಗೆ ಇಷ್ಟು ಖರ್ಚಾಗಿ ಬಿಡುವುದಲ್ಲಾ ಎಂದು ಒಂದು ದಿನವಾದರೂ ಅವನಾಗಲಿ ಅವನ ಹೆಂಡತಿ ಯಾಗಲಿ ಭಾವಿಸಿದವರಲ್ಲ. ಸ್ವಾರ್ಥವನ್ನು ಬಿಟ್ಟು ನಿಜವಾದ ಧರ್ಮಬುದ್ಧಿಯಿಂದ ಖರ್ಚು ಮಾಡಿದಷ್ಟೂ ದೇವರು ಹೆಚ್ಚು ಹೆಚ್ಚಾಗಿ ಕೊಡುವನೆಂದು ಅವನಿಗೆ ಒಂದು

ಗೊಡ್ಡು ನಂಬಿಕೆಯಿತ್ತು. ಅದರಂತೆ ಅವನಿಗೆ ಒಂದು ವರ್ಷವಾಗಲಿ ಯಾವುದಾದರೂ ಒಂದು ವಿಧದಲ್ಲಿ ಒಂದಕ್ಕಿಂತ ಹೆಚ್ಚಾಗಿ ಸಂಪಾದನೆಯಾಗದೆ ಇರುತ್ತಿರಲಿಲ್ಲ. ಕೊನೆಗೆ ಅವನು ಧರ್ಮಾರ್ಥವಾದ ಒಂದು ವಿದ್ಯಾರ್ಥಿ ನಿಲಯವನ್ನು ಏರ್ಪಾಡು ಮಾಡಿ ಅದನ್ನು ನಡೆಸುತ್ತ ಬಂದನು. ಇದು ಬಹಳ ವರ್ಷಗಳಾದ ಮೇಲೆ ನಡೆದ ಮಾತು. ಇದಕ್ಕೆ ಮುಂಚೆ ಅವನು ಸಂಸಾರ ಹೂಡಿದ ಹೊಸದರಲ್ಲಿ ಒಂದು ಸಂಗತಿ ನಡೆಯಿತು. ಅದರಿಂದ ಅವನ ಮತ್ತು ಸೀತಮ್ಮನ ಮನಸ್ಸು ಬಡ ವಿದ್ಯಾರ್ಥಿಗಳ ಕಷ್ಟವನ್ನು ನೋಡಿ ಹೇಗೆ ಬೆಣ್ಣೆಯಂತೆ ಕರಗಿ ಹೋಗುತ್ತಿತ್ತೆಂದೂ ತಮ್ಮ ಸುಖವನ್ನಾದರೂ ಒತ್ತರಿಸಿ ಹೇಗೆ ಅವರು ಹುಡುಗರ ಸುಖವನ್ನು ನೋಡುತ್ತಿದ್ದರೆಂದೂ ಗೊತ್ತಾಗುತ್ತದೆ.

ಒಂದು ಮಧ್ಯಾಹ್ನಕ್ಕೆ ಸರಿಯಾಗಿ ಮಾಧವರಾಯನು ಎಲ್ಲಿಂದಲೋ ತುಂಬ ಆಯಾಸಪಟ್ಟು ಮನೆಗೆ ಬಂದನು. ಮೈತುಂಬ ಬೆವರು ಹರಿಯುತ್ತಿತ್ತು. ಸೀತಮ್ಮನು ಲಾವಂಚದ ಬೀಸಣಿಗೆ ಹೂಜಿಯ ನೀರನ್ನು ಹಾಕಿ ಬೀಸಿಕೊಳ್ಳುವುದಕ್ಕೆ ಕೊಟ್ಟು ನಿಂಬೆಯ ಹಣ್ಣಿನ ಪಾನಕ ಮಾಡುತ್ತಿದ್ದಳು. ಅಷ್ಟು ಹೊತ್ತಿಗೆ ಸರಿಯಾಗಿ ಒಬ್ಬ ಹುಡುಗನು ಹೊರಗೆ "ಭವತಿ ಭಿಕ್ಷಾಂ ದೇಹಿ!" ಎಂದು ಕೂಗಿದನು. "ಹೋಗಿ ಬಿಟ್ಟು ಬಾಪ್ಪ" ಎಂದಳು. ಅದು ಅವನಿಗೆ ಕೇಳಲಿಲ್ಲವೋ ಏನೋ, ಪುನಃ "ಭವತಿ ಭಿಕ್ಷಾಂ ದೇಹಿ!" ಎಂದನು. ಸೀತಮ್ಮ ಸ್ವಲ್ಪ ಬೇಸರಪಟ್ಟುಕೊಂಡು "ಕೈಯಲ್ಲಿ ಕೆಲಸ ಏದೆ, ಒಂದು ದಿನ ಹೋಗಿಬಾ ಅಂದರೆ ಹೋಗಬಾರದೇನೋ?" ಎಂದು ಸ್ವಲ್ಪ ಗದರಿಸಿದರು. ಗಂಡನು ತುಂಬ ಆಯಾಸಪಟ್ಟು ಬಂದಿರುವಾಗ ತಾನು ಪಾನಕ ಮಾಡುತ್ತಿರುವುದನ್ನು ಬಿಟ್ಟು ಎದ್ದು ಹೋಗಲು ಅವಳಿಗೆ ಮನಸ್ಸು ಬರಲಿಲ್ಲ. ಕೂಡಲೇ ಮಾಧವು ಮೆಲ್ಲಗೆ 'ಸೀತಾ!' ಎಂದನು.

ಸೀತೆಯು ಕತ್ತೆತ್ತಿ ನೋಡಿದಳು.

"ಅದನ್ನು ಅಲ್ಲಿಡು; ಎದ್ದು ಹೋಗಿ ಮೊದಲು ಆ ಹುಡುಗನಿಗೆ ಅನ್ನ ಹಾಕಿ ಬಿಟ್ಟು ಬಾ! ಪಾನಕವನ್ನು ನಾನು ಮಾಡಿಕೊಳ್ಳುತ್ತೇನೆ."

"ಇಷ್ಟು ಹೊತ್ತಿಗೆ ಆ ಹುಡುಗ ಹೊರಟು ಹೋಗಿರಬಹುದು."

"ಹೋಗಿ ನೋಡು; ಮಗ್ಗುಲು ಮನೆಗೆ ಹೋಗಿದ್ದರೆ ಕರೆ."

ಸೀತಮ್ಮನು ಹೊರಗೆ ಬಂದು ನೋಡಲು ಆ ಹುಡುಗನು ಇನ್ನೂ ನಿಂತಿದ್ದನು. ಹುಡುಗ ಇನ್ನೂ ಚಿಕ್ಕವನು – ಸುಮಾರು ಹತ್ತು ಹನ್ನೆರಡು ವರ್ಷವಿರಬಹುದು. ಕೈಯಲ್ಲಿ ಒಂದು ಒದ್ದೆಯ ಜೋಳಿಗೆ, ಒಂದು ಸಣ್ಣ ಅಲ್ಯುಮಿನಿಯಂ ಬಟ್ಟಲು, ಒಂದು ಪದರದ ಒಂದು ಕೊಳೆಯ ಬಟ್ಟೆಯನ್ನು ಉಟ್ಟುಕೊಂಡಿದ್ದನು. ಹೊದ್ದು ಕೊಂಡಿದ್ದುದೂ ಹಾಗೆ ಇತ್ತು. ತಲೆಯು ಒಂದು ಪೊದೆಯಾಗಿಯೂ ಮುಖವು ಒಣ

ಗಿಪ ನಿಂಬೆಕಾಯಿಯಂತೆಯೂ ಇದ್ದುವು. ಅವನು ಅಲ್ಲಿಯೇ ಇದ್ದುದನ್ನು ನೋಡಿ ಸೀತಮ್ಮನು ಅನ್ನವನ್ನು ತಂದು ಹಾಕಿದಳು. ಅಷ್ಟು ಹೊತ್ತಿಗೆ ಮಾಧವರಾಯನೂ ಎದ್ದು ಬಂದು ಆ ಹುಡುಗನನ್ನು ನೋಡಿ "ನಿನ್ನ ಹೆಸರೇನೋ ಹುಡುಗ" ಎಂದು ಕೇಳಿದನು. "ನನ್ನ ಹೆಸರು ಶಿವು" ಎಂದು ಆ ಹುಡುಗನು ಉತ್ತರಕೊಟ್ಟನು.

ಮಾಧವರಾಯನು ಪಾನಕವನ್ನು ಮಾಡಿಕೊಂಡಿರಲಿಲ್ಲವಾದ ಕಾರಣ ಸೀತಮ್ಮನು ಪುನಃ ಬಂದು ಅದನ್ನು ಮಾಡಿ ಒಂದು ಬೆಳ್ಳಿಯ ಲೋಟಕ್ಕೆ ಹಾಕಿ ಗಂಡನ ಕೈಗೆ ಕೊಡುವುದಕ್ಕೆ ಹೋದಳು; ಆಗ ಅವನ ಮುಖದಲ್ಲಿ ಆಯಾಸದ ಚಿಹ್ನೆಯಿರಲಿಲ್ಲ; ಏನೋ ಯೋಚನೆ ಮಾಡುತ್ತಿದ್ದನು. ಲೋಟವನ್ನು ಕೈಗೆ ತೆಗೆದುಕೊಂಡು "ಸೀತಾ!" ಎಂದನು.

"ಏನು"

"ನಿನಗೆ ಆ ಹುಡುಗನ ಮೇಲೆ ಸಿಟ್ಟು ಬಂತೇನು?"

"ಸಿಟ್ಟೇನೂ ಇಲ್ಲ, ನೀವು ದಣಿದು ಆಯಾಸಪಟ್ಟು ಬಂದಿದ್ದೀರಿ; ನಿಮಗೆ ಸ್ವಲ್ಪ ಪಾನಕ ಮಾಡಿ ಕೊಡೋಣವೆಂದು ಹೋದಾಗಲೇ ಅವನು ಬಂದನಲ್ಲಾ, ಅದಕ್ಕೆ 'ಹೋಗಿ ಬಿಟ್ಟು ಬಾ' ಎಂದೆ ಅಷ್ಟೆ."

"ಅವರ ಮೇಲೆ ಸಿಟ್ಟು ಮಾಡಬಾರದು. ಸೀತಾ! ಪಾಪ, ಆ ಹುಡುಗರು ಓದಬೇಕೆಂಬ ಆಸೆಯಿಂದ ಎಷ್ಟೆಷ್ಟೋ ಬಳಲುತ್ತಾರೆ; ಅವರಿಗೆ ಹೊತ್ತಿಗೆ ಹೊತ್ತಿಗೆ ಅನ್ನವಿಲ್ಲ, ನೀರಿಲ್ಲ, ಹೀಗಿರುತ್ತಾರೆ; ಒಂದೊಂದು ದಿನ ಉಪವಾಸ ಕೂಡ ಇದ್ದು ಬಿಡುತ್ತಾರೆ. ಏನೋ, ದೇವರು ನಮಗೆ ಒಂದು ತುತ್ತು ಅನ್ನವನ್ನು ಕೊಟ್ಟಿರುವುದರಿಂದ ಅವರು ನಮ್ಮ ಮನೆಯ ಬಾಗಿಲಿಗೆ ಬರುತ್ತಾರೆ; ಅನೇಕರಿಗೆ ತಾಯಿತಂದೆ ಯಾರೂ ಇರುವುದಿಲ್ಲ; ಅಂಥವರಿಗೆ ನಾವೇ ತಾಯಿ ತಂದೆ ಎಲ್ಲ. ಅಂಥವರಿಗೆ ಸಿಡುಕಿನಿಂದ ಅನ್ನ ಹಾಕಿದರೆ ಅದು ಅವರ ಮೈಗೆ ಹತ್ತುವುದಿಲ್ಲ. ನಮಗೆ ಅನ್ನದಾನದ ಫಲವೂ ಬರುವುದಿಲ್ಲ. ಸೀತಾ! ಇನ್ನು ಮೇಲೆ ನೀನು ನನಗೋಸ್ಕರವಾದರೂ ಆ ಬಡಪಾಯಿಗಳ ಮೇಲೆ ಯಾವ ಕಾರಣದಿಂದಲೂ ಸಿಟ್ಟು ಮಾಡಬೇಡ."

ಸೀತೆ ಅವನ ಪಕ್ಕದಲ್ಲಿಯೇ ಸುಮ್ಮನೆ ಮಾತಿಲ್ಲದೆ ನಿಂತಿದ್ದಳು; ಮುಖ ತಗ್ಗಿ ಹೋಗಿತ್ತು.

"ನಾನು ಹೀಗೆ ಹೇಳುತ್ತೇನೆಂದು ಕೋಪವೇ ಸೀತಾ?". ಸೀತೆ ಸುಮ್ಮನಿದ್ದಳು.

"ಸೀತಾ, ನಾನು ಹೀಗೆ ಹೇಳಿದೆನೆಂದು ನೊಂದುಕೊಳ್ಳಬೇಡ; ನಿನ್ನಲ್ಲಿ ತಪ್ಪೆಣಿಸುವುದಕ್ಕೆ ಹೀಗೆ ಹೇಳಿದೆನೆಂದು ಭಾವಿಸಬೇಡ; ಏನೋ, ಅವರ ಕಷ್ಟಗಳೆಲ್ಲಾ ನನಗೆ ಚೆನ್ನಾಗಿ ಗೊತ್ತು; ಆದುದರಿಂದ ಹೀಗೆ ಹೇಳಿದೆ. ಒಂದಾನೊಂದು ಕಾಲದಲ್ಲಿ ನಾನೂ ಜೋಳಿಗೆ ಹಿಡಿದು ಹೀಗೆ ಬೀದಿ ಬೀದಿ ಅಲೆಯುತ್ತಿದ್ದೆ. ನಿಮ್ಮ ಮನೆಗೂ

ಭಿಕ್ಷಾನ್ನಕ್ಕೆ ಬರುತ್ತಿದ್ದೆ. ಆಗ ನೀನು ಇನ್ನೂ ಸಣ್ಣ ಹುಡುಗಿ; ಒಂದು ದಿನ ಭಿಕ್ಷಾನ್ನಕ್ಕಾಗಿ ನಿಮ್ಮ ಮನೆಯ ಬಾಗಿಲಿಗೆ ಬಂದೆ; ಆಗ ನಿಮ್ಮ ತಾಯಿ ಏನೋ ತಿಂಡಿಯನ್ನು ತೆಗೆದುಕೊಂಡು ಹೋಗಿ ಹಾಕು ಎಂದರು. ನೀನು ಆಟದಲ್ಲಿದ್ದರಿಂದ ನನ್ನನ್ನು "ನಿಂತುಕೊಂಡಿರೋ ಬಂದೆ" ಎಂದು ಗದರಿಸಿದ್ದೆ. ನಾನು ಕಾದಿರಬೇಕಾಯಿತು. ಇದೇನೊ ಬಹಳ ಹಿಂದಿನ ಮಾತು; ನಿನಗೆ ಮರೆತು ಹೋಗಿದೆ. ಆದರೆ ನಾನು ಮರೆತಿಲ್ಲ."

ಸೀತೆಯ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಮಾಧು ಪುನಃ ಹೇಳತೊಡಗಿದನು:

"ಸೀತಾ, ನಿನ್ನ ತಂದೆತಾಯಿಗಳ ಗುರುತು ಆಗುವುದಕ್ಕೆ ಮೊದಲು ನನಗೆ ಬಹಳ ಕಷ್ಟವಾಗುತ್ತಿತ್ತು; ಕೆಲವು ಮನೆಗಳಲ್ಲಿ ತಂಗಳನ್ನವನ್ನು ಹಾಕುತ್ತಿದ್ದರು. ಮತ್ತೆ ಕೆಲವರು ಹಳಸಿದ ಅನ್ನವನ್ನು ಕೂಡ ಹಾಕಿಬಿಡುತ್ತಿದ್ದರು. ಬರಿಯ ಹೊಟ್ಟೆಯಲ್ಲಿ ಎಷ್ಟೋ ರಾತ್ರಿಗಳನ್ನು ಕಳೆದಿರುವೆನು. ಈಗ ಅವುಗಳನ್ನು ನೆನೆಸಿಕೊಂಡರೆ ಕಣ್ಣಿನಲ್ಲಿ ನೀರು ಬರುವುದು; ದೇವರ ದಯದಿಂದ ನಿನ್ನ ತಂದೆ ತಾಯಿಗಳ ಗುರುತು ಆಯಿತು. ಆ ಮೇಲೆ ನನಗೆ ಎಷ್ಟೋ ಸುಲಭವಾಯಿತು; ನಿನ್ನ ತಂದೆಯಿಂದ ನನಗೆ ಎಷ್ಟೋ ವಿಧದಲ್ಲಿ ಸಹಾಯವಾಯಿತು; ಅವರೇ ನನ್ನ ಭಾಗದ ದೇವರಾಗಿದ್ದರು."

ಸೀತೆಗೆ ಇನ್ನು ತಡೆಯಲಾಗಲಿಲ್ಲ; ಕಣ್ಣಿನಿಂದ ನೀರು ಹರಿದುಹೋಯಿತು; ಅವಳು ಸುಮ್ಮನೆ ನೆಲವನ್ನು ನೋಡುತ್ತ ಕೇಳುತ್ತಿದ್ದಳು. ಮಾಧು ಪುನಃ ಪ್ರಾರಂಭಿಸಿದನು:

"ಸೀತಾ, ಮೂರು ವರ್ಷಗಳ ಕಾಲ ಮಲಗುವುದಕ್ಕೆ ಹಾಸಿಗೆಯಿಲ್ಲದೆ ಬರೀ ಗೋಣಿ ತಟ್ಟಿನ ಮೇಲೆ ಮಲಗಿ ಕಾಲ ಕಳೆದೆ. ಒಂದು ಇಟ್ಟಿಗೆಯ ಮೇಲೆ ಹರಳೆಣ್ಣೆಯ ಹಣತೆಯೊಂದನ್ನು ಇಟ್ಟುಕೊಂಡು ರಾತ್ರಿಯ ಹೊತ್ತು ಓದುತ್ತಿದ್ದೆ. ನಾನು ಇದ್ದ ಕೊಠಡಿಯು ಚಿಕ್ಕದು; ಮೂಲೆಯಿಂದ ಮೂಲೆಗೆ ಮಲಗಬೇಕಾಗಿತ್ತು. ಒಂದು ಮೂಲೆಯಲ್ಲಿ ಹಣತೆ; ಒಂದು ಮೂಲೆಯಲ್ಲಿ ಪುಸ್ತಕ, ಮತ್ತೊಂದು ಮೂಲೆಯಲ್ಲಿ ಒಂದು ತುಂಡು ಪೊರಕೆ, ಹೊದಿಯುವುದಕ್ಕೆ ಒಂದು ಪಂಚೆ ಬಿಟ್ಟರೆ ಮತ್ತೊಂದಕ್ಕೆ ಗತಿಯಿರಲಿಲ್ಲ; ಅಂಗಿಯೊಳಗೆ ಒಂದೆರಡು ಪುಸ್ತಕಗಳನ್ನು ಸುತ್ತಿ ಅದನ್ನೇ ತಲೆಯ ಕೆಳಗೆ ಇಟ್ಟುಕೊಳ್ಳುತ್ತಿದ್ದೆ. ಪುಸ್ತಕಕ್ಕೆ ದುಡ್ಡಿಲ್ಲ. ಪರೀಕ್ಷೆಗೆ ಹಣ ಕಟ್ಟುವುದಕ್ಕೆ ದುಡ್ಡಿಲ್ಲ; ಯಾರಾರನ್ನೋ ಅಂಗಲಾಚಿ ಬೇಡಿದೆ, ಒಂದು ಕಾಸೂ ಸಿಕ್ಕಲಿಲ್ಲ; ನಿರಾಶನಾಗಿ ಊರಿಗೆ ಹೋಗಬೇಕೆಂದಿದ್ದೆ; ಆಗ ನಿನ್ನ ತಂದೆಯು ನನ್ನ ಭಾಗದ ದೇವರ ಹಾಗೆ ಬಂದು ಸಹಾಯ ಮಾಡಿದರು......"

ಆ ದಿನ ರಾತ್ರೆ ಸುಮಾರು ಹನ್ನೆರಡು ಗಂಟೆಯ ಸಮಯ; ಮಾಧವರಾಯನು ಇನ್ನೂ ಒಂದು ಪುಸ್ತಕವನ್ನು ಹಿಡಿದುಕೊಂಡು ಓದುತ್ತಿದ್ದಾನೆ; ದೀಪವು ಉರಿಯು

ತ್ತಿಗೆ; ಮಗ್ಗುಲಲ್ಲಿ ಕೃಷ್ಣಮೂರ್ತಿಯೂ ಸೀತೆಯೂ ಮಲಗಿ ನಿದ್ದೆ ಹೋಗು ತ್ತಿದ್ದಾರೆ; ಸೀತೆಯು ಇದ್ದಕ್ಕಿದ್ದ ಹಾಗೆ ಕನವರಿಸಿಕೊಂಡಳು.

"ಬಾಪ್ಪ, ಬಾ ನನ್ನ ಕಂದ! ಇಲ್ಲೇ ಊಟ ಮಾಡು ಬಾಪ್ಪಾ!"

ಮಾಧು ತಿರುಗಿ ನೋಡಿದನು, ಯಾರೂ ಇರಲಿಲ್ಲ, ಮೂರ್ತಿಯು ಮಲಗಿತ್ತು. ಆದ್ದರಿಂದ ಕನವರಿಕೆಯೆಂದು ತಿಳಿದು ''ಸೀತಾ ಸೀತಾ! ಎಚ್ಚರ ಮಾಡಿಕೊಳ್ಳೆ; ಕಂದ ಯಾರೆ? ಊಟ ಯಾರು ಮಾಡಬೇಕೆ?" ಎಂದನು. ಅವಳು ಕಣ್ಣಿನಿಂದ ನೀರು ಸುರಿಸುತ್ತಾ ಅರ್ಧ ಎಚ್ಚರಿನಲ್ಲಿ, ''ಶಿವು ಭಿಕ್ಷಾನ್ನಕ್ಕೆ ಬಂದಿದ್ದ; ಇವತ್ತು ಎಲ್ಲಿಯೂ ಸಿಕ್ಕಲಿಲ್ಲ ತಾಯಿ ಎಂದ...ನೀವು ಹೇಳಿದ್ದೆಲ್ಲಾ ಜ್ಞಾಪಕಕ್ಕೆ ಬಂತು; ಊಟ ಮಾಡು ಏಳು ಎಂದೆ" ಎಂದಳು. ''ಇದ್ಯಾಕೆ ಅಳುತ್ತೀಯೆ? ಶಿವು ಎಲ್ಲಿದ್ದಾನೆಯೇ, ಎಚ್ಚರ ಮಾಡಿಕೊಳ್ಳೆ!" – ಎಂದು ಮಾಧುವು ಸ್ವಲ್ಪ ತಣ್ಣೀರನ್ನು ತಂದು ಅವಳ ಕಣ್ಣುಗಳನ್ನು ಒರೆಸಿದನು.

ಸೀತೆಗೆ ಎಚ್ಚರವಾಯಿತು; ನಾಚಿಕೆಯಿಂದ ನಕ್ಕು ಮುಸುಕು ಹಾಕಿಕೊಂಡು ಮಲಗಿ ಬಿಟ್ಟಳು. ಮರುದಿನ ಎಂದಿನಂತೆ ಶಿವು ಭಿಕ್ಷಾನ್ನಕ್ಕೆ ಬಂದು–

"ಭವತಿ ಭಿಕ್ಷಾಂ ದೇಹಿ!" ಎಂದು ಕೂಗಿದನು.

ಅದನ್ನು ಕೇಳಿ ಸೀತಮ್ಮನು ತಟ್ಟನೆ ಎದ್ದು ಹೋಗಿ, ಆದರದಿಂದ ಅವನ ತಲೆ ಯನ್ನು ಸವರಿ ಬೆನ್ನು ತಟ್ಟಿ, "ಶಿವು ಇನ್ನು ಮೇಲೆ ನೀನು ಭಿಕ್ಷಾನ್ನಕ್ಕೆ ಹೋಗಬೇಡ; ನಮ್ಮ ಮನೆಯಲ್ಲಿಯೇ ಇದ್ದು ಬಿಡು; ಅವರು ನಿನಗೆ ಬೇಕಾದ ಪುಸ್ತಕ ಬಟ್ಟೆ ಬರೆ ಗಳನ್ನೆಲ್ಲಾ ಕೊಡಿಸುವರು" ಎಂದಳು.

ಅವನಿಗೆ ಆಶ್ಚರ್ಯವಾಯಿತು. ಅಲ್ಲಿಂದ ಮುಂದಕ್ಕೆ ಅವನು ಸೀತಮ್ಮನ ಇಷ್ಟ ದಂತೆ ಅವರ ಮನೆಯಲ್ಲಿಯೇ ನಿಂತನು. ಅಂದು ಹುಡುಗನಿಗೆ ಬಡಿಸುತ್ತ ಸೀತಮ್ಮನು.

"ಶಿವು ನಿಮ್ಮ ಊರು ಯಾವುದು?" ಎಂದು ಕೇಳಿದಳು. "ನಂಗೊತ್ತಿಲ್ಲ."

"ನಿಮ್ಮ ಅಪ್ಪ ಅಮ್ಮ ಎಲ್ಲಿದ್ದಾರೆ?" "ನೀವೇ ನನ್ನ ಗೋಪು ಅಪ್ಪ ಅಮ್ಮ ಎಲ್ಲ" "ಏನು? ನಿನಗೆ ತಂದೆ ತಾಯಿ ಯಾರೂ ಇಲ್ಲವೇ?" "ಗೋಪು ಒಂದು ದಿನ, ನಮ್ಮ ಅಪ್ಪ ಅಮ್ಮ ಸತ್ತು ಏಳೆಂಟು ವರ್ಷ ಆಯಿತೆಂದು ಹೇಳಿ ಅತ್ತ; ನಾನೂ ಅತ್ತೆ; ಅಷ್ಟೆ; ನೀವೇ ನನ್ನ ಗೋಪು ಅಪ್ಪ ಅಮ್ಮ ಎಲ್ಲ" ಸೀತೆಯು ಕಣ್ಣಿನಲ್ಲಿ ನೀರು ಬಂತು.

"ಗೋಪು ಯಾರು?" "ಗೋಪು ನನ್ನ ಅಣ್ಣ" "ಅವರೆಲ್ಲಿದಾರೆ?"

"ಅವನು ಆಸ್ಪತ್ರೇಲಿ ಸತ್ತುಹೋದ; ಅವನೇ ಸಾಯುವಾಗ ನನ್ನ ಕರೆದು 'ಇನ್ನು ಮೇಲೆ ನಿನಗೆ ಯಾರು ಅನ್ನ ಹಾಕುತ್ತಾರೆಯೋ ಅವರೇ ನಿನ್ನ ಗೋಪು ಅಪ್ಪ ಅಮ್ಮ ಎಲ್ಲ; ನಾನು ಹೋಗುತ್ತೇನೆ' ಎಂದು ಹೇಳಿದ. ಸೀತಮ್ಮನು ಕಣ್ಣೀ ರನ್ನು ಒರಸಿಕೊಂಡು "ಶಿವು, ಹಾಗಾದರೆ ನಿನಗೆ ಯಾರೂ ಇಲ್ಲವೇ?" ಎಂದು ಕೇಳಿ ದಳು. "ಇದ್ದಾರೆ" "ಯಾರು?" "ನೀವೇ – ನನ್ನ ಗೋಪು ಅಪ್ಪ ಅಮ್ಮ ಎಲ್ಲಾ!" ★

ಜನಪದ ಸೇವಾ ಟ್ರಸ್ಟ್ ಪ್ರಕಟಣೆಗಳು

ಒಂದು ಹುಲ್ಲಿನ ಕ್ರಾಂತಿ

ಪ್ರಾಕೃತಿಕ ವ್ಯವಸಾಯದ ಸಿದ್ಧಾಂತ

ಮೂಲ : ಮಸನೋಬು ಫುಕುವೊಕಾ ಕನ್ನಡಾನುವಾದ : ಸಂತೋಷ್ ಕೌಲಗಿ **ಬೆಲೆ : 15 ರೂ.**

ಮನುಕುಲ ವಿನಾಶ: ಬಾಂಬ್ ಬೇಕಿಲ್ಲ, ಅಣುಸ್ಥಾವರ ಸಾಕು

ಡಾ॥ ಎ. ಎನ್. ನಾಗರಾಜ್

ಬೆಲೆ : 2–00 ರೂ.

ಸಹಜ ಕೃಷಿ : ಒಂದು ಪರಿಚಯ

ಲೇಖಕರು : ಪೂರ್ಣಚಂದ್ರ ತೇಜಸ್ವಿ

ಬೆಲೆ : ೬/=ರೂ

ಮಾರಾಟಕ್ಕೆ

ಕಾವ್ಯಸುಧಾ ಎಂ. ಎಸ್. ನರಸಿಂಹಮೂರ್ತಿ

ಬೆಲೆ : 12–00 ರೂ.

ಕಾಂಪೋಸ್ಟ್ ಗೊಬ್ಬರದ ಚಮತ್ಕಾರ

ಬೆಲೆ: 5-00 ರೂ.

KRNM 44

ಜನಪದ ಸೇವಾ ಟ್ರಸ್ಟ್ ಪರವಾಗಿ ಸುರೇಂದ್ರ ಕೌಲಗಿ ಅವರಿಂದ ಮೇಲುಕೋಟೆಯ
ಜನಪದ ಸೇವಾ ಟ್ರಸ್ಟ್ ಮುದ್ರಣಾಲಯದಲ್ಲಿ ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.
ಸಂಪಾದಕರು : ಎಸ್. ಪಟ್ಟಾಭಿರಾಮನ್ ಸಹಾಯಕ ಸಂಪಾದಕರು : ಸುರೇಂದ್ರ ಕೌಲಗಿ